ನಿಮ್ಮೂರು ಸುದ್ದಿ

ಕನ್ನಡ ದಿನ ಪತ್ರಿಕೆ NIMMURU SUDDI

ಸಂಪಾದಕರು: ಸುಂದರ್ Editor : Sundar

ಏಕ ಕಾಲಕ್ಕೆ ಬಳ್ಳಾರಿ, ಕೊಪ್ಪಳ, ಯಾದಗಿರಿ, ರಾಯಚೂರು, ಕಲಬುರ್ಗಿ, ಬೀದರ, ವಿಜಯನಗರ ಜಿಲ್ಲೆಗಳಲ್ಲಿ ಪ್ರಕಟ

Volume: 01, Issue: 82 RNI Number : KNKAN/25/A2770 01-04-2026 Wednesday Page 04, Price 2/- suddinimmuru@gmail.com Mob:-8660146563

ಸಂಪುಟ :01 ಸಂಚಿಕೆ :82 ರಾಯಚೂರು 01-04-2026 ಬುಧವಾರ ಪುಟ 04 ಬೆಲೆ ರೂ.2/- ಮೊ:8660146563

ಬಿಸಿಲಿನ ಉರಿ; ಬೆಳಗಾವಿ, ವಿಜಯಪುರ, ಬಾಗಲಕೋಟೆ, ಕಲಬುರ್ಗಿ ವಿಭಾಗದ ಎಲ್ಲಾ ಜಿಲ್ಲೆಗಳಲ್ಲಿ ಕಚೇರಿ ಕೆಲಸದ ಸಮಯ ಬದಲಾವಣೆ

ಬೆಂಗಳೂರು,ಮಾ.31-

ಬಿಸಿಲಿನ ಉರಿ ಹಿನ್ನೆಲೆ ಬೆಳಗಾವಿ ವಿಭಾಗದ ವಿಜಯಪುರ ಮತ್ತು ಬಾಗಲಕೋಟೆ ಹಾಗೂ ಕಲಬುರ್ಗಿ ವಿಭಾಗದ ಎಲ್ಲಾ ಜಿಲ್ಲೆಗಳಿಗೆ 2026ರ ಏಪ್ರಿಲ್ ಮತ್ತು ಮೇ ಮಾಹೆಗಳಲ್ಲಿ ಕಚೇರಿ ಕೆಲಸದ ವೇಳೆಯನ್ನು ಬದಲಾವಣೆ ಮಾಡಿ ಆದೇಶಿಸಲಾಗಿದೆ.

ಕಚೇರಿ ಸಮಯದಲ್ಲಿ ಬದಲಾವಣೆ: ಬೆಳಗಾವಿ ವಿಭಾಗದ ವಿಜಯಪುರ, ಬಾಗಲಕೋಟೆ ಹಾಗೂ ಕಲಬುರಗಿ ವಿಭಾಗದ ಎಲ್ಲ ಜಿಲ್ಲೆಗಳಲ್ಲಿ ಬಿಸಿಲಿನ ತಾಪಮಾನ ಹೆಚ್ಚಾಗಿರುವುದಿಂದ ನೌಕರರು ಕರ್ತವ್ಯ ನಿರ್ವಹಿಸುವಲ್ಲಿ ಎದುರಿಸುತ್ತಿರುವ ತೊಂದರೆಯನ್ನು ಮಾನವೀಯ ದೃಷ್ಟಿಯಿಂದ ಪರಿಗಣಿಸಿ, ಏಪ್ರಿಲ್ ಮತ್ತು ಮೇ ಮಾಹೆಗಳಲ್ಲಿ ಕಚೇರಿ ಕೆಲಸದ ಸಮಯವನ್ನು ಬೆಳಗ್ಗೆ 8 ರಿಂದ 1.30 ರವರೆಗೆ ನಿಗದಿಪಡಿಸಿ ಆದೇಶ ಹೊರಡಿಸುವಂತೆ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ ಮನವಿ ಮಾಡಿತ್ತು.

ಬೆಳಗ್ಗೆ 8.00 ಗಂಟೆಯಿಂದ ಮಧ್ಯಾಹ್ನ 1.30ರವರೆಗೆ : ಪ್ರಸ್ತಾಪಿಸಿದ ಜಿಲ್ಲೆಗಳಲ್ಲಿ ಬಿಸಿಲಿನ ತಾಪಮಾನ ಹೆಚ್ಚಾಗಿರುವುದನ್ನು ಪರಿಗಣಿಸಿ, ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಸಮಯ ಬದಲಾವಣೆ ಬಗ್ಗೆ ಆದೇಶ ಹೊರಡಿಸಲಾಗಿದೆ. ಅದರಂತೆ 2026ನೇ ಸಾಲಿನ ಏಪ್ರಿಲ್ ಮತ್ತು ಮೇ ಮಾಹೆಗಳಲ್ಲಿ ಹೆಚ್ಚಿನ ಬಿಸಿಲಿನ ತಾಪಮಾನದ ಹಿನ್ನೆಲೆಯಲ್ಲಿ ಬೆಳಗಾವಿ ವಿಭಾಗದ ವಿಜಯಪುರ ಮತ್ತು ಬಾಗಲಕೋಟೆ ಹಾಗೂ ಕಲಬುರಗಿ ವಿಭಾಗದ ಎಲ್ಲಾ ಜಿಲ್ಲೆಗಳಿಗೆ ಪ್ರಸ್ತುತ ಜಾರಿಯಲ್ಲಿರುವ ಸರ್ಕಾರಿ ಕಚೇರಿಗಳ ವೇಳಾಪಟ್ಟಿಯ ಬದಲಾಗಿ ಏಪ್ರಿಲ್ ಮತ್ತು ಮೇ ಮಾಹೆಗಳಲ್ಲಿ ಬೆಳಗ್ಗೆ 8.00 ಗಂಟೆಯಿಂದ ಮಧ್ಯಾಹ್ನ 1.30 ಗಂಟೆಯವರೆಗೆ ಬದಲಾವಣೆ ಮಾಡಲಾಗಿದೆ.

ಈ ಎಲ್ಲ ಜಿಲ್ಲೆಗಳಲ್ಲಿ ಸರ್ಕಾರದ ಆದೇಶ ಅನ್ವಯ: ಬೆಳಗಾವಿ ವಿಭಾಗದ ವಿಜಯಪುರ ಮತ್ತು ಬಾಗಲಕೋಟೆ ಹಾಗೂ ಕಲಬುರಗಿ ವಿಭಾಗದ ಎಲ್ಲಾ ಜಿಲ್ಲೆಗಳಲ್ಲಿನ ಸರ್ಕಾರಿ ನೌಕರರು ಬದಲಾದ ಸಮಯದಲ್ಲಿ ಎಂದಿನಂತೆ ಯಾವುದೇ ಲೋಪ/



ಅಡೆತಡೆಯಿಲ್ಲದೆ ತಮ್ಮ ಕರ್ತವ್ಯವನ್ನು ನಿರ್ವಹಿಸಬೇಕು. ಸಾರ್ವಜನಿಕರಿಗೆ ಯಾವುದೇ ರೀತಿ ಅನಾನುಕೂಲತೆಯಾಗದಂತೆ ಮತ್ತು ಜಿಲ್ಲಾಧಿಕಾರಿಗಳು / ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ತುರ್ತು ಸಂದರ್ಭದಲ್ಲಿ ಯಾವುದೇ ಕಾರ್ಯವನ್ನು ನಿರ್ವಹಿಸಲು ನಿರ್ದೇಶಿಸಿದಲ್ಲಿ ಸಮಯದ ಪರಿಮಿತಿಯಿಲ್ಲದೆ ಕರ್ತವ್ಯ ನಿರ್ವಹಿಸಬೇಕು ಎಂದು ಸೂಚಿಸಲಾಗಿದೆ.

ನಿಮಗೆ ಬೆಂಬಿಡದೇ ಮೈಗ್ರೇನ್ ಕಾಡುತ್ತಿದೆಯೇ? ಈ ಸಮಸ್ಯೆ ಹೋಗಲಾಡಿಸ ತಜ್ಞರು ಸೂಚಿಸಿರುವ ಪರಿಹಾರ ಕ್ರಮಗಳಿವು!

ಭಾರತದಾದ್ಯಂತ ವೈದ್ಯರು ಮತ್ತು ಹವಾಮಾನ ತಜ್ಞರು ಆತಂಕಕಾರಿ ಸಂಗತಿಯನ್ನು ಗಮನಿಸುತ್ತಿದ್ದಾರೆ. ಬೇಸಿಗೆಯಲ್ಲಿ ತಾಪಮಾನ ಹೆಚ್ಚುತ್ತಿದೆ. ಬಿಸಿಲಿನ ಅಲೆಗಳು ಹೆಚ್ಚಾಗಿ ಕಂಡುಬರುತ್ತಿವೆ. ವಿಶೇಷವಾಗಿ ಹೈದರಾಬಾದ್ ಕರ್ನಾಟಕದಲ್ಲಿ ಋತುವಿನ ಆರಂಭದಲ್ಲಿ ತಾಪಮಾನ ಏರುತ್ತಿರುವುದಲ್ಲದೇ, ಅಧಿಕ ಸಮಯದವರೆಗೂ ಉಷ್ಣಾಂಶ ಹೆಚ್ಚಿರಲಿದೆ.

ಇದೀಗ ಪರೀಕ್ಷೆಗಳು ಇರುವುದರಿಂದ ಮಕ್ಕಳು ನಿರಂತರವಾಗಿ ನೀರು ಕುಡಿಯುವುದು, ಬಿಸಿಲಿಗೆ ತಲೆಯೊಡ್ಡದೇ ಇರುವಂತೆ ನೋಡಿಕೊಳ್ಳಬೇಕು. ಕಾರ್ಮಿಕರು ಮುಂಜಾಗ್ರತೆ ವಹಿಸಬೇಕು. ಹೀಟ್ ವೇವ್ ಕಂಡೀಷನ್ ಬಗ್ಗೆ ಎಚ್ಚರಿಕೆಯಿಂದ ಇರಬೇಕು ಉತ್ತರ ಕರ್ನಾಟಕದಲ್ಲಿ ಹೆಚ್ಚಿನ ಮಟ್ಟದಲ್ಲಿ ಇರಬಹುದೆಂದು ಅಂದಾಜಿಸಲಾಗಿದೆ. ಜನರು ಮುನ್ನೆಚ್ಚರಿಕೆ ತೆಗೆದುಕೊಳ್ಳಬೇಕು ಎಂದು ತಜ್ಞರು ತಿಳಿಸಿದ್ದಾರೆ.

ಭಗವಾನ್ ಮಹಾವೀರರ ಶಾಂತಿ, ಸೌಹಾರ್ಧತೆ

ಸಂದೇಶಗಳು ಇಂದಿಗೂ ಪ್ರಸ್ತುತ: ಡಾ.ಹಂಪಣ್ಣ ಸಜ್ಜನ್

ರಾಯಚೂರು ಮಾರ್ಚ್ 31

ಭಗವಾನ್ ಮಹಾವೀರರು ತಮ್ಮ ಜೀವಿತಾವಧಿಯಲ್ಲಿ ಪರಿಪಾಲನೆ ಮಾಡಿದ ಮತ್ತು ಇಡೀ ಜಗತ್ತಿಗೆ ತಿಳಿಸಿಕೊಟ್ಟ ಶಾಂತಿ, ಸೌಹಾರ್ಧತೆ ಮತ್ತು ಸಹೋದರತೆ ಸಂದೇಶಗಳು ಇಂದಿಗೂ ಪ್ರಸ್ತುತವಾಗಿವೆ ಎಂದು ರಾಯಚೂರು ಸಹಾಯಕ ಆಯುಕ್ತರಾದ ಡಾ.ಹಂಪಣ್ಣ ಸಜ್ಜನ್ ಅವರು ಹೇಳಿದರು.

ಮಾರ್ಚ್ 31ರ ಮಂಗಳವಾರ ದಂದು ನಗರದ ಸುಮತಿನಾಥ ಜೈನ ಶ್ವೇತಾಂಬರ ಮೂರ್ತಿ ಪೂಜಕ ಆರಾಧನಾ ಭವನದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ರಾಯಚೂರು ಮಹಾನಗರ ಪಾಲಿಕೆ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ನಡೆದ ಭಗವಾನ್ ಶ್ರೀ ಮಹಾವೀರ ಜಯಂತಿ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಅಹಿಂಸಾ ತತ್ವ ಪ್ರತಿಪಾದಿಸಿದ ಮಹಾವೀರರು ಸೇರಿದಂತೆ ಅನೇಕ ಮಹನೀಯರು ಸಮಾಜಕ್ಕೆ ತಮ್ಮದೇ ಆದ ಕೊಡುಗೆ ಮತ್ತು ಜೀವನ ಸಂದೇಶ ನೀಡಿದ್ದಾರೆ. ಅಂತಹ ಮಹನೀಯರ ಜಯಂತಿಗಳು ಕೇವಲ ಆಚರಣೆಗಳಿಗೆ ಮಾತ್ರ ಸೀಮಿತವಾಗದೇ, ಅವರ ತತ್ವಾದರ್ಶಗಳು ಜೀವನದಲ್ಲಿ ಅಳವಡಿಸಿಕೊಂಡಾಗ ಮಹನೀಯರಿಗೆ ಗೌರವ ಸಲ್ಲಿಸಿದಂತಾಗುತ್ತದೆ ಎಂದು ಹೇಳಿದರು.



ಈ ವೇಳೆ ಜಿಲ್ಲಾ ಹೆಚ್ಚುವರಿ ಪೊಲೀಸ್ ಅಧೀಕ್ಷಕ ಕುಮಾರಸ್ವಾಮಿ ಅವರು ಮಾತನಾಡಿ, ಕರುಣೆ, ಅಹಿಂಸೆ, ಸಮಾನತೆ ಸೇರಿದಂತೆ ಭಗವಾನ್ ಮಹಾವೀರರು ಬೋಧನೆ ಮಾಡಿದ ಅಂಶಗಳನ್ನು ಜೀವನದಲ್ಲಿ ಪ್ರತಿಯೊಬ್ಬರು ಅಳವಡಿಸಿಕೊಳ್ಳಬೇಕು. ನಾವು ಬದುಕಬೇಕು, ಬೇರೆಯವರನ್ನು ಬದುಕಲು ಬಿಡಬೇಕೆಂಬುದನ್ನು ಪ್ರತಿಯೊಬ್ಬರೂ ಪಾಲಿಸಬೇಕು. ಮಹಾವೀರರು ತಿಳಿಸಿದ ಸಂದೇಶಗಳು ಕೇವಲ ಜೈನ ಧರ್ಮಕ್ಕೆ ಮಾತ್ರ ಸೀಮಿತವಲ್ಲ; ಅವರ ಸಂದೇಶಗಳಿದ ಇಡೀ ಮನುಕುಲದ ಉದ್ದಾರವಾಗುತ್ತದೆ ಎಂದರು.

ಈ ವೇಳೆ ಉಪನ್ಯಾಸಕರಾಗಿ ರಾಯಚೂರಿನ ಪ್ರೇಮಲತಾ ಅವರು ಮಾತನಾಡಿ, ಜಗತ್ತಿನ ಜನರು ಅನುಭವಿಸುತ್ತಿದ್ದ ಅನೇಕ ತೊಂದರೆಗಳಿಗೆ ಪರಿಹಾರ ನೀಡಿದ ಅನೇಕ ಮಹನೀಯರಲ್ಲಿ ಮಹಾವೀರರು ಕೂಡ ಒಬ್ಬರಾಗಿದ್ದಾರೆ. ಜಗತ್ತನ್ನು ಉತ್ತಮ ರೀತಿಯಲ್ಲಿ ಕೊಂಡೊಯ್ಯಲು ತಮ್ಮ ಬದುಕನ್ನೇ ಮುಡುಪಾಗಿಟ್ಟಿದ್ದಾರೆ. ಜೊತೆಗೆ ಧಾರ್ಮಿಕ ಕ್ರಾಂತಿಯನ್ನು ಮೂಡಿಸಿದವರಲ್ಲಿ ಭಗವಾನ್ ಮಹಾವೀರರು ಕೂಡ ಒಬ್ಬರಾಗಿದ್ದಾರೆ ಎಂದು ಹೇಳಿದರು.

ಜಿಲ್ಲಾಧಿಕಾರಿಗಳಿಂದ ಮೆರವಣಿಗೆ ಚಾಲನೆ: ಭಗವಾನ್ ಮಹಾವೀರ ಭಾವಚಿತ್ರ ಮೆರವಣಿಗೆಗೆ ಜಿಲ್ಲಾಧಿಕಾರಿಗಳಾದ ನಿತೀಶ್ ಕೆ. ಅವರು ಚಾಲನೆ ನೀಡಿದರು.

3ನೇ ಪುಟಕ್ಕೆ

71 ದಿನದಲ್ಲಿ 1,079 ಪ್ರಕರಣ ವಿಲೇವಾರಿ, 2 ಲಕ್ಷ

28 ಸಾವಿರ ದಂಡ, 34 ಸಾವಿರ ಪರಿಹಾರ:ಬಿ.ವೆಂಕಟಸಿಂಗ್

ರಾಯಚೂರು,ಮಾ.31

ಕರ್ನಾಟಕ ಮಾಹಿತಿ ಆಯೋಗ ಕಲಬುರಗಿ ಪೀಠದಲ್ಲಿ ಕಳೆದ ಐದು ತಿಂಗಳಲ್ಲಿ 71 ದಿನ ಕಲಾಪ ನಡೆಸಿ 1,079 ಪ್ರಕರಣಗಳು ವಿಲೇವಾರಿ ಮಾಡಿದೆ ಎಂದು ಕರ್ನಾಟಕ ಮಾಹಿ ಆಯೋಗದ ಕಲಬುರಗಿ ಪೀಠದ ರಾಜ್ಯ ಮಾಹಿತಿ ಆಯುಕ್ತರಾದ ಶ್ರೀ ಬಿ.ವೆಂಕಟ ಸಿಂಗ್ ತಿಳಿಸಿದ್ದಾರೆ.

ಈ ಕುರಿತು ಪತ್ರಿಕಾ ಪ್ರಕಟಣೆ ನೀಡಿರುವ ಅವರು, 24ನೇಯ ನವಂಬ-ರ2025 ರಿಂದ ಮಾರ್ಚ ಅಂತ್ಯಕ್ಕೆ 2,520 ಪ್ರಕರಣಗಳು ವಿಚಾರಣೆಗೆ ಕೈಗೆತ್ತಿಕೊಂಡು 1,079 ಪ್ರಕರಣಗಳು ವಿಲೇವಾರಿ ಮಾಡಿ



ರುವುದಾಗಿ ತಿಳಿಸಿದ್ದಾರೆ.

ಅರ್ಜಿದಾರರಿಗೆ ಮಾಹಿತಿ ನೀಡಲು ಕಾಲ ಹರಣ ಮಾಡಿ ಸಮಯ ಮತ್ತು ಆರ್ಥಿಕ ನಷ್ಟ ಉಂಟು ಮಾಡಿದ ಕಾರಣ ನೊಂದ ಅರ್ಜಿದಾರರಿಗೆ 34 ಸಾವಿರ ಪರಿ ಹಾರ ನೀಡಲು ಆದೇಶ ಮಾಡಲಾ ಗಿದೆ ಎಂದು ಹೇಳಿದ್ದಾರೆ.

ವಿಶೇಷವಾಗಿ 71 ದಿನದಲ್ಲಿ ಕಳೆದ ಒಂದು ದಶಕದಿಂದ ವಿಲೇವಾ ರಿಗೆ ಬಾಕಿ ಇದ್ದ ಹಳೇ ಪ್ರಕರಣ ಗಳನ್ನು ಆದ್ಯತೆ ಮೇಲೆ ಎಲೇ ಮಾಡಿ ರುವುದಾಗಿ ತಿಳಿಸಿರುವ ಅವರು ಬರುವ ದಿನಗಳಲ್ಲಿ ಹೊಸ ಪ್ರಕರಣ ಗಳು ಕೈಗೆತ್ತಿಕೊಂಡು ವಿಚಾರಣೆ ಶೀಘ್ರವಾಗಿ ಮುಗಿಸಿ ಅರ್ಜಿದಾರ ರಿಗೆ ಮಾಹಿತಿ ಕೊಡಿಸಲು ಕ್ರಮ ವಹಿಸುವುದಾಗಿ ತಿಳಿಸಿದ್ದಾರೆ.

ಒಳ ಮೀಸಲಾತಿ ವರ್ಗೀಕರ: ರಾಜ್ಯ ಸರ್ಕಾರಕ್ಕೆ ಎಚ್ಚರಿಕೆ



ರಾಯಚೂರು, ಮಾ. 31-

ಪರಿಶಿಷ್ಟ ಜಾತಿಗಳ ಒಳ ಮೀಸಲಾತಿ ವರ್ಗೀಕರಣ ವಿಚಾರ ಮತ್ತೆ ತೀವ್ರ ಚರ್ಚೆಗೆ ಕಾರಣವಾಗಿದ್ದು, ಸರ್ಕಾರದ ನೀತಿಗಳ ವಿರುದ್ಧ ತೀವ್ರ ಆಕ್ಷೇಪಣೆ ವ್ಯಕ್ತವಾಗಿದೆ. ನಗರ ಪತ್ರಿಕಾ ಭವನದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಡಾ. ಅಂಬೇಡ್ಕರ್ ಪೀಪಲ್ಸ್ ಪಾರ್ಟಿ ರಾಜ್ಯ ಕಾರ್ಯಾಧ್ಯಕ್ಷ ಮಹೇಂದ್ರ ಕುಮಾರ್ ಮಿತ್ರ ಇಂದು ಮಾತನಾಡಿ ಸರ್ಕಾರದ ಕ್ರಮಗಳನ್ನು ಪ್ರಶ್ನಿಸಿ ಕಠಿಣ ಎಚ್ಚರಿಕೆ ನೀಡಿದರು.

2023ರಲ್ಲಿ ರಾಜ್ಯ ಸರ್ಕಾರವು ಪರಿಶಿಷ್ಟ ಜಾತಿಗಳ ಮೀಸಲಾತಿಯನ್ನು ಶೇ.15ರಿಂದ 17ಕ್ಕೆ ಮತ್ತು ಪಂಗಡಗಳ ಮೀಸಲಾತಿಯನ್ನು ಶೇ.3ರಿಂದ 7ಕ್ಕೆ ಏರಿಸಿ ಒಟ್ಟು ಶೇ.56 ಮೀಸಲಾತಿ ನಿಗದಿ ಮಾಡಿತ್ತು. ಆದರೆ ಈ ನಿರ್ಧಾರವನ್ನು ಪ್ರಶ್ನಿಸಿ ಸಲ್ಲಿಸಿದ ಅರ್ಜಿಯ ಹಿನ್ನೆಲೆಯಲ್ಲಿ ಉಚ್ಚ ನ್ಯಾಯಾಲಯ ತಡೆ ನೀದಾಲಾಗಿದೆ.

ಸರ್ವೋಚ್ಚ ನ್ಯಾಯಾಲಯದ ತೀರ್ಪುಗಳನ್ನು ಉಲ್ಲೇಖಿಸಿದ ಅವರು ಸಂವಿಧಾನದ ಅಡಿಯಲ್ಲಿ ಘೋಷಿಸಲಾದ ಕಾನೂನುಗಳನ್ನು ಎಲ್ಲಾ ಪ್ರಾಧಿಕಾರಗಳು ಕಟ್ಟುನಿಟ್ಟಾಗಿ ಪಾಲಿಸಬೇಕೆಂದು ಹೇಳಿದರು. ''ದಾವೀಂದರ್ ಸಿಂಗ್'' ಪ್ರಕರಣದ ತೀರ್ಪಿನ ಆಧಾರದ ಮೇಲೆ ರಾಜ್ಯ ಸರ್ಕಾರ ರಚಿಸಿದ ನಾಗಮೋಹನ್ ದಾಸ್ ಆಯೋಗದ ವರದಿ ಕುರಿತು ಗಂಭೀರ ಪ್ರಶ್ನೆಗಳನ್ನು ಎತ್ತಿದರು.

ಆಯೋಗವು 5 ಗುಂಪುಗಳ ವರ್ಗೀಕರಣ ಶಿಫಾರಸು ಮಾಡಿದರೂ, ಸರ್ಕಾರವು ಅದನ್ನು 3 ಗುಂಪುಗಳಾಗಿ ಬದಲಾಯಿಸಿರುವುದು ವೈಜ್ಞಾನಿಕ ಆಧಾರವಿಲ್ಲದ ನಿರ್ಧಾರ.

ಪರಿಶಿಷ್ಟ ಜಾತಿಗಳ ಪಟ್ಟಿಯಲ್ಲಿ ಇರುವ ಕೆಲವು ಜಾತಿಗಳನ್ನು ಕೈಬಿಡುವ ಕುರಿತು ಯಾವುದೇ ಶಿಫಾರಸು ಮಾಡದಿರುವುದನ್ನೂ ಪ್ರಶ್ನಿಸಿದರು.

''ಕ್ರೀಮಿ ಲೇಯರ್ ಜಾರಿಗೆ ತರದೆ ಕೇವಲ ವರ್ಗೀಕರಣ ಮಾಡುವುದರಿಂದ ನೈಜ ಹಿಂದುಳಿದ

3ನೇ ಪುಟಕ್ಕೆ

ಜೂಜಾಟ,ಮಾದಕ ದಂಧೆ ಹೆಚ್ಚಳ: ಕಠಿಣ ಕ್ರಮಕ್ಕೆ ಕನ್ನಡ ಸೇನೆಯ ಆಗ್ರಹ



ರಾಯಚೂರು, ಮಾ. 31-

ರಾಯಚೂರು ಜಿಲ್ಲೆಯ ವಿವಿಧ ತಾಲೂಕುಗಳು ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ ಇತ್ತೀಚಿನ ದಿನಗಳಲ್ಲಿ ಕಳ್ಳತನ, ಜೂಜಾಟ (ಇಸ್ಪೀಟ್), ದರೋಡೆ ಮತ್ತು ಗಾಂಜಾ ಸೇರಿದಂತೆ ಮಾದಕ ದ್ರವ್ಯಗಳ ಅಕ್ರಮ ಮಾರಾಟ ಗಣನೀಯವಾಗಿ ಹೆಚ್ಚುತ್ತಿರುವುದು ಕಾನೂನು ಸುವ್ಯವಸ್ಥೆಗೆ ಗಂಭೀರ ಸವಾಲಾಗಿ ಪರಿಣಮಿಸಿದೆ. ಈ ಬೆಳವಣಿಗೆಗೆ ಕನ್ನಡ ಸೇನೆ ಕರ್ನಾಟಕ ಸಂಘಟನೆ ತೀವ್ರ ಆತಂಕ ವ್ಯಕ್ತಪಡಿಸಿದೆ. ಈ ಹಿನ್ನೆಲೆಯಲ್ಲಿ ಕನ್ನಡ ಸೇನೆ ಕರ್ನಾಟಕದ ರಾಯಚೂರು ಜಿಲ್ಲಾ ಸಮಿತಿಯವರು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ () ಹಾಗೂ ಜಿಲ್ಲಾ ಪೊಲೀಸ್ ಅಧಿಕಾರಿಗಳಿಗೆ ಮನವಿ ಪತ್ರ ಸಲ್ಲಿಸಿ ತಕ್ಷಣ ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿದ್ದಾರೆ. ಸಂಘಟನೆಯ ಪ್ರಕಾರ, ಜಿಲ್ಲೆಯ ಹಲವೆಡೆ ಹಗಲು-ರಾತ್ರಿ ಎನ್ನದೆ ಬಹಿರಂಗವಾಗಿ ಜೂಜಾಟ ಹಾಗೂ ಮಾದಕ ದ್ರವ್ಯಗಳ ಅಕ್ರಮ ಮಾರಾಟ ನಡೆಯುತ್ತಿದ್ದು, ಯುವಜನತೆ ವ್ಯಸನದ ಬಲೆಗೆ ಸಿಲುಕುತ್ತಿರುವುದು ಆತಂಕಕಾರಿ ಸಂಗತಿಯಾಗಿದೆ. ಇದರಿಂದ ಸಮಾಜದಲ್ಲಿ ಅಪರಾಧ ಪ್ರಮಾಣ ಹೆಚ್ಚುತ್ತಿರುವುದಲ್ಲದೆ, ಸಾರ್ವಜನಿಕ ಶಾಂತಿ ಮತ್ತು ಭದ್ರತೆಗೆ ಧಕ್ಕೆಯಾಗುತ್ತಿದೆ.

ವಿಶೇಷವಾಗಿ ಮಾದಕ ವ್ಯಸನಿಗಳ ಹಾವಳಿಯಿಂದ ಮಹಿಳೆಯರು ಮತ್ತು ಸಾಮಾನ್ಯ ನಾಗರಿಕರು ಭಯಭೀತ ಪರಿಸ್ಥಿತಿಯಲ್ಲಿ ಸಂಚರಿಸಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ ಎಂದು ಸಂಘಟನೆ ಆರೋಪಿಸಿದೆ.

ರಾಯಚೂರು, ದೇವದುರ್ಗ, ಅರಕೇರ, ಸಿರವಾರ, ಮಾನವಿ, ಲಿಂಗಸೂಗುರು, ಮಸ್ಕಿ ಹಾಗೂ ಸಿಂಧನೂರು ಸೇರಿದಂತೆ ಎಲ್ಲಾ

3ನೇ ಪುಟಕ್ಕೆ

ಹರವಿ ವಿದ್ಯಾರ್ಥಿ ರೈಜ್ ಥ್ರೋ ಬಾಲ್ ನ್ಯಾಷನಲ್ ಚಾಂಪಿಯನ್



ಸಿರವಾರ, ಮಾ. 31-

ನೇಪಾಳದಲ್ಲಿ ಅಂಡರ್ -19 ವರ್ಷದ, ಮಾ.28 ರಂದು ನಡೆದ ರೈಜ್ ಥ್ರೋ ಬಾಲ್ ಚಾಂಪಿಯನ್ ಶಿಪ್ ಪಂದ್ಯದಲ್ಲಿ ಭಾಗವಹಿಸಿ ಬಾಂಗ್ಲಾದೇಶದ ವಿರುದ್ಧ ಸೆಣಸಿ ಪ್ರಥಮ ಸ್ಥಾನಗಳಿಸಿದ್ದಾನೆ. ತಾಲೂಕಿನ ಹರವಿ ಗ್ರಾಮದ ವಿದ್ಯಾರ್ಥಿ ಕು.ಲಕ್ಷ್ಮೀನರಸಿಂಹ ತಂದೆ ಶ್ರೀನಿವಾಸ ಈ ವಿದ್ಯಾರ್ಥಿ ಶ್ರೀ ಸಾಯಿ ಚೈತನ್ಯಶಾಲೆಯಲ್ಲಿ ವಿದ್ಯಾಭ್ಯಾಸ ಮಾಡಿ ಪ್ರಸ್ತುತ ಬೆಂಗಳೂರಿನ ವಿದ್ಯಾಭ್ಯಾಸ ಹಾಗೂ ತರಬೇತಿ ಪಡೆಯುತ್ತಿದ್ದಾನೆ. ಈ ಬಾಲಕನಿಗೆ ಸಂಸ್ಥೆಯು ಅಧ್ಯಕ್ಷ ಚಂದ್ರಶೇಖರ ರಡ್ಡಿ, ದೈಹಿಕ ಶಿಕ್ಷಕರಾದ ಶಿವಪುತ್ರ ಇವರ ಮಾರ್ಗದರ್ಶನದ ಮೂಲಕ ಭಾರತಕ್ಕೆ ಹಾಗೂ ರಾಜ್ಯದ ಸಿರವಾರ ತಾಲೂಕಿಗೆ ಕೀರ್ತಿಯನ್ನು ತಂದುಕೊಟ್ಟಿದ್ದಾನೆ ಎಂದು ಶಿಕ್ಷಣ ಸಂಸ್ಥೆಯ ಆಡಳಿತ ಮಂಡಳಿ, ಪಾಲಕರು, ಹರವಿ ಗ್ರಾಮ ಪಂಚಾಯತಿ ಅಧ್ಯಕ್ಷರು, ಸದಸ್ಯರು, ಗ್ರಾಮಸ್ಥರು, ಕ್ರೀಡಾ ಅಭಿಮಾನಿಗಳು ಅಭಿನಂದಿಸಿದ್ದಾರೆ.

ವಿಶ್ವ ಮಹಿಳಾ ದಿನಾಚರಣೆ: ಮಹಿಳಾ ನೌಕರರ ಕ್ರೀಡಾಕೂಟ

ರಾಯಚೂರು, ಮಾ. 31-

ವಿಶ್ವ ಮಹಿಳಾ ದಿನಾಚರಣೆಯ ಅಂಗವಾಗಿ ನಗರದ ಮಹಾತ್ಮ ಗಾಂಧಿ ಕ್ರೀಡಾಂಗಣದಲ್ಲಿ ಮಹಿಳಾ ನೌಕರರಿಗಾಗಿ ಆಯೋಜಿಸಲಾದ ಕ್ರೀಡಾಕೂಟ ಭರ್ಜರಿಯಾಗಿ ನಡೆಯಿತು.

ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಜಿಲ್ಲಾ ಘಟಕ, ಕರ್ನಾಟಕ ರಾಜ್ಯ ಮಹಿಳಾ ಸರ್ಕಾರಿ ನೌಕರರ ಸಂಘ, ಸಾವಿತ್ರಿಬಾಯಿ ಫುಲೆ ಶಿಕ್ಷಕಿಯರ ಸಂಘದ ಜಿಲ್ಲಾ ಮತ್ತು ತಾಲೂಕು ಘಟಕಗಳು ಸೇರಿದಂತೆ ವಿವಿಧ ವೃಂದ ಸಂಘಗಳ ಸಂಯುಕ್ತ ಆಶ್ರಯದಲ್ಲಿ ಈ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ಕಾರ್ಯಕ್ರಮವನ್ನು ಅಪರ ಜಿಲ್ಲಾಧಿಕಾರಿಗಳಾದ ಶಿವಾನಂದ ಭಜಂತ್ರಿ ಉದ್ಘಾಟಿಸಿ ಮಾತನಾಡಿ, ''ಕ್ರೀಡಾಕೂಟದಲ್ಲಿ ಗೆಲುವಿಗಿಂತ



ಭಾಗವಹಿಸುವಿಕೆ ಮುಖ್ಯ. ಮಹಿಳಾ ನೌಕರರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿರುವುದು ಸಂತೋಷದ ಸಂಗತಿ. ಇಂತಹ ಕಾರ್ಯಕ್ರಮಗಳು ಆರೋಗ್ಯ ಮತ್ತು ಕ್ರೀಡಾಸ್ಫೂರ್ತಿಯನ್ನು ಹೆಚ್ಚಿಸುತ್ತವೆ,'' ಎಂದು ಹೇಳಿದರು. ನೌಕರರ ಸಂಘದ ಜಿಲ್ಲಾಧ್ಯಕ್ಷ ಕೃಷ್ಣ ಶಾವಂತಗೇರಿ ಮಾತನಾಡಿ, ''ನೌಕರರು ಇಂದಿನ ದಿನಗಳಲ್ಲಿ ಮಾನಸಿಕ ಒತ್ತಡದಲ್ಲಿ ಕೆಲಸ ಮಾಡುತ್ತಿದ್ದಾರೆ. ಇಂತಹ ಕ್ರೀಡಾಕೂಟಗಳು ದೈಹಿಕ ಹಾಗೂ ಮಾನಸಿಕ ಆರೋಗ್ಯವನ್ನು ವೃದ್ಧಿಸಲು ಸಹಕಾರಿ,'' ಎಂದು ಅಭಿಪ್ರಾಯಪಟ್ಟರು.

ರಾಯಚೂರಿನಲ್ಲಿ ಮೊದಲ ಬಾರಿಗೆ ನಡೆದ ಈ ಕ್ರೀಡಾಕೂಟದಲ್ಲಿ ವಿವಿಧ ಇಲಾಖೆಗಳ 300ಕ್ಕೂ ಹೆಚ್ಚು ಮಹಿಳಾ ನೌಕರರು ಭಾಗವಹಿಸಿ ತಮ್ಮ ಕೌಶಲ್ಯವನ್ನು ಪ್ರದರ್ಶಿಸಿದರು. ದೈಹಿಕ ಶಿಕ್ಷಕರ ಸಂಘದ ಅಧ್ಯಕ್ಷ ಯಂಕಪ್ಪ ಪಿರಂಗಿ ಅವರ ನೇತೃತ್ವದಲ್ಲಿ ವಿವಿಧ ಸ್ಪರ್ಧೆಗಳು ಅಚ್ಚುಕಟ್ಟಾಗಿ

3ನೇ ಪುಟಕ್ಕೆ



ಏ 06 ರಂದು ಸಂತೆ ಹರಾಜು- ಸುರೇಶ ಶೇಟ್ಟಿ

ಸಿರವಾರ .ಮಾ.31-

ಪಟ್ಟಣದಲ್ಲಿ ಪ್ರತಿ ಸೋಮವಾರ ಜರುಗುವ ಸಂತೆ ಕರ ವಸೂಲಾತಿಗಾಗಿ ವಾರ್ಷಿಕ ಹರಾಜು ಪ್ರಕ್ರಿಯೆಯು 206 ರಂದು ನಡೆಯಲಿದೆ ಎಂದು ಪಟ್ಟಣ ಪಂಚಾಯತಿ ಮುಖ್ಯಾಧಿಕಾರಿ ಸುರೇಶ ಶೆಟ್ಟಿ ತಿಳಿಸಿದ್ದಾರೆ. ಪಟ್ಟಣದ ವಾರದ ಮಾರುಕಟ್ಟೆ ಮತ್ತು ದಿನದ ಮಾರುಕಟ್ಟೆ ಯ ಹರಾಜು ಪ್ರಕ್ರಿಯೆಯಲ್ಲಿ ಭಾಗವಹಿಸುವವರು ಏ06 ಬೆಳಿಗ್ಗೆ 11 ಕ್ಕೆ, ನೂತನ ಪಟ್ಟಣ ಪಂಚಾಯತಿ ಕಾರ್ಯಾಲಯದಲ್ಲಿ ಬಹಿರಂಗ ಹರಾಜಿನಲ್ಲಿ ಹಾಜರಿರಬೇಕು. ಮಾರುಕಟ್ಟೆ ಹರಾಜಿಗೆ ರೂ 50 ಸಾವಿರ, ಹಾಗು ದಿನದ ಮಾರುಕಟ್ಟೆ ಹರಾಜು ಠೇವಣಿಗೆ 25 ಸಾವಿರ ರೂ.ಗಳನ್ನು ಪಾವತಿಸಿ, ಗುರುತಿನ ಚೀಟಿಯೊಂದಿಗೆ ಹರಾಜಿನಲ್ಲಿ ಭಾಗವಹಿಸಬೇಕು ಎಂದು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕಲಬುರಗಿ ಹೆಲ್ತ್ ಹಬ್‌ಗೆ ಅಡಿಪಾಯ ಹಾಕಿದ್ದೇವೆ: ಡಾ.ಶರಣಪ್ರಕಾಶ್ ಪಾಟೀಲ್



ಕಲಬುರಗಿ,ಮಾ.31-

ಮಧುಮೇಹಿ ರೋಗಿಗಳ ಚಿಕಿತ್ಸೆ ಗೆ ಬೆಂಗಳೂರು ಹೊರತುಪಡಿಸಿ ಕಲಬುರಗಿ ಮತ್ತು ಮೈಸೂರಿನಲ್ಲಿ ಇನ್ಸ್ಟಿಟ್ಯೂಟ್ ಆಫ್ ಡಯಾಬೆಟಾಲೋಜಿ ಘಟಕ ಸ್ಥಾಪಿಸಲಾಗುತ್ತಿದೆ ಎಂದು ವೈದ್ಯಕೀಯ ಶಿಕ್ಷಣ ಸಚಿವ ಡಾ.ಶರಣಪ್ರಕಾಶ್ ಪಾಟೀಲ್ ಹೇಳಿದರು.

ಸೋಮವಾರ ಇಲ್ಲಿನ ಜಿಮ್ಸ್ ಆಸ್ಪತ್ರೆಯ ಆವರಣದಲ್ಲಿ ಫೂಟ್ ಸೆಕ್ಯೂರ್ ಸ್ಟೈಟ್ ಏಡ್ ಸಂಸ್ಥೆ ಹಾಗೂ ಕಲಬುರಗಿಯ ಜಿಮ್ಸ್ ಆಸ್ಪತ್ರೆ ಸಂಯುಕ್ತಾಶ್ರಯದಲ್ಲಿ ಪ್ಯಾನ್ ಇಂಡಿಯಾ ಮಧುಮೇಹಿಗಳ ಆರೋಗ್ಯ - ಜಾಗೃತಿ, ಸಲಹೆ ಮತ್ತು ಸ್ಕ್ರೀನಿಂಗ್ (ಪ್ರಯಾಸ್) ಅಭಿಯಾನಕ್ಕೆ ಚಾಲನೆ ನೀಡಿ ಮಾತನಾಡಿದ ಡಾ.ಶರಣಪ್ರಕಾಶ್ ಪಾಟೀಲ್, ಗುಲ್ಬರ್ಗಾ ವಿ.ವಿ.ಕ್ಯಾಂಪಸ್ ಆವರಣದಲ್ಲಿ ಡಯಾಬೆಟಾಲೋಜಿ ಘಟಕದ ಪ್ರಗತಿಯ ಕಾರ್ಯ ನಡೆಸುತ್ತಿದೆ. ಹೀಗೆ ಅನೇಕ ಕೆಲಸಗಳು ಮಾಡುವ ಮೂಲಕ ಕಲಬುರಗಿ ಹೆಲ್ತ್ ಹಬ್‌ಗೆ ಅಡಿಪಾಯ ಹಾಕಿದ್ದೇವೆ ಎಂದರು.

ಜಿಮ್ಸ್ ಆವರಣದಲ್ಲಿ ತಾಯಿ-ಮಕ್ಕಳ ಅಸ್ಪತ್ರೆ, ಕ್ರಿಟಿಕಲ್ ಕೇರ್ ಯುನಿಟ್, 200 ಹಾಸಿಗೆಯ ಕ್ಯಾನ್ಸರ್ ಆಸ್ಪತ್ರೆ ಸ್ಥಾಪಿಸಲಾಗುತ್ತಿದೆ. ಬರ್ನ್ಸ್ ಯೂನಿಟ್ ಉದ್ಘಾಟನೆಗೆ ಸಿದ್ಧಗೊಂಡಿದೆ. 371 ಹಾಸಿಗೆ ಸಾಮರ್ಥ್ಯದ ಜಯದೇವ ಆಸ್ಪತ್ರೆ ನಡೆಯುತ್ತಿದೆ. ಇದಲ್ಲದೆ ಗುಲ್ಬರ್ಗಾ ವಿ.ವಿ. ಅವರಣದಲ್ಲಿ ನಿಮ್ಹಾನ್ಸ್ ಶಾಖೆ, ಇಂದಿರಾಗಾಂಧಿ ಮಕ್ಕಳ ಆಸ್ಪತ್ರೆ ಘಟಕ ನಿರ್ಮಾಣ ಕಾರ್ಯ ಸಹ ಪ್ರಗತಿಯಲ್ಲಿವೆ ಎಂದು ಡಾ.ಶರಣಪ್ರಕಾಶ ಪಾಟೀಲ್ ತಿಳಿಸಿದರು. ಡಾ.ಸಂಜಯ್ ಶರ್ಮಾ ಮತ್ತು ಡಾ.ಪವನ್ ಅವರು ಮಧುಮೇಹಿ ರೋಗಿಗಳ ಪಾದಗಳ ಆರೋಗ್ಯ - ಜಾಗೃತಿ, ಸಲಹೆ ಮತ್ತು ಸ್ಕ್ರೀನಿಂಗ್ ಪ್ರಯಾಸ್ ಅಭಿಯಾನ ಕೈಗೊಂಡಿರುವುದು ತುಂಬಾ ಉಪಯುಕ್ತವಾಗಿದೆ. ಸಂಚಾರಿ ಚಿಕಿತ್ಸೆ ವಾಹನದಲ್ಲಿ ಜಿಲ್ಲಾ ಮತ್ತು ತಾಲೂಕು ಕೇಂದ್ರಕ್ಕೆ ಹೋಗಿ ಸಂಚಾರಿ ವಾಹನದಲ್ಲಿಯೇ ತಪಾಸಣೆ ಮಾಡಿ ರೋಗಿಗಳಿಗೆ ಯಾವ ರೀತಿಯ ಪಾದರಕ್ಷೆ ಧರಿಸಬೇಕು, ಪಾದ ಆರೋಗ್ಯದ ಬಗ್ಗೆ ಮಾಹಿತಿ ನೀಡಲಾಗುತ್ತದೆ. ಇದಕ್ಕೆ ತಕ್ಕಂತೆ ಸಂಚಾರಿ ವಾಹನ ಅಗತ್ಯ ವೈದ್ಯಕೀಯ ಸಲಕರಣೆಗಳೊಂದಿಗೆ ಸಜ್ಜುಗೊಳಿಸಿದೆ ಎಂದರು.

ಇತ್ತೀಚೆಗೆ ಮಂಡಿಸಲಾದ 2026-27ನೇ ಸಾಲಿನ ಆಯವ್ಯಯದಲ್ಲಿ ಕಲಬುರಗಿ ಐ.ವಿ.ಎಫ್. ಸೆಂಟರ್ ಸ್ಥಾಪಿಸಲು ಘೋಷಿಸಿದ್ದು, ಅದನ್ನು ಸಹ ಇಲ್ಲಿ ಸ್ಥಾಪಿಸಲಾಗುತ್ತದೆ. ಇದಲ್ಲದೆ ಮಲ್ಟಿ ಸ್ಕಿಲ್ ಡೆವಲೆಪಮೆಂಟ್ ಸೆಂಟರ್ ಜೊತೆಗೆ ಕೌಶಲ್ಯಾಭಿವೃದ್ಧಿ ಇಲಾಖೆಯಿಂದ ಸ್ಕಿಲ್ ಲ್ಯಾಬ್ ಕಲಬುರಗಿಯಲ್ಲಿ ಸ್ಥಾಪನೆಗೆ ಘೋಷಣೆ ಮಾಡಲಾಗಿದ್ದು, ಸ್ನೈಡರ್ ಸಂಸ್ಥೆಯ ಸಹಯೋಗದಿಂದ ಪ್ರತಿ ವರ್ಷ 1,000 ಜನ ನಿರುದ್ಯೋಗಿಗಳಿಗೆ ಕೌಶಲ್ಯ ತರಬೇತಿ ನೀಡುವುದರ ಜೊತೆಗೆ ಪ್ಲೇಸ್ ಮೆಂಟ್ ಸಹ ನೀಡಲಾಗುತ್ತದೆ ಎಂದು ಡಾ.ಶರಣಪ್ರಕಾಶ್ ಪಾಟೀಲ್ ತಿಳಿಸಿದರು.

ಫೂಟ್ ಸೆಕ್ಯೂರ್ ಸಂಸ್ಥೆಯ ವೈದ್ಯರಾದ ಡಾ.ಸಂಜಯ್ ಶರ್ಮಾ ಮಾತನಾಡಿ, ವಿಶ್ವದಲ್ಲಿ ಡಯಾಬಿಟಿಸ್ ರೋಗಿಗಳ ಸಂಖ್ಯೆ ಕ್ಯಾನ್ಸರ್ ಗಿಂತ ಹೆಚ್ಚಾಗಿದೆ. ಇದರ ಮೋಟಾಲಿಟಿ ರೇಟ್ ಸಹ ಹೆಚ್ಚಾಗಿದೆ. ಪಾದದ ಆರೋಗ್ಯದ ಕುರಿತು ಮುಂಜಾಗ್ರತೆ ವಹಿಸಿದಲ್ಲಿ ಶೇ.80ರಷ್ಟು ಪ್ರಕರಣದಲ್ಲಿ ಕಾಲು, ಬೆರಳುಗಳನ್ನು ಕಳೆದುಕೊಳ್ಳುವುದನ್ನು ತಡೆಯಬಹುದು. ಈ ನಿಟ್ಟನಲ್ಲಿ ಪ್ಯಾನ್ ಇಂಡಿಯಾ ಪ್ರಯಾಸ್ ಜಾಗೃತಿ ಮಹತ್ವದ್ದಾಗಿದೆ. ಅದು ಕಲಬುರಗಿಯಂತಹ ಟೈರ್ 2 ಸಿಟಿನಿಂದಲೆ ಆರಂಭಿಸಿರುವುದು ಸಂತಸ ತಂದಿದೆ ಎಂದರು.

ನಂತರ ಸಚಿವ ಡಾ.ಶರಣಪ್ರಕಾಶ ಪಾಟೀಲ್ ಅವರು, ಪ್ಯಾನ್ ಇಂಡಿಯಾ ಮಧುಮೇಹ ಪಾದಗಳ ಆರೋಗ್ಯ - ಜಾಗೃತಿ, ಸಲಹೆ ಮತ್ತು ಸ್ಕ್ರೀನಿಂಗ್ (ಪ್ರಯಾಸ್) ಅಭಿಯಾನಕ್ಕೆ ಚಾಲನೆ ನೀಡಿದರು.

ಕಾರ್ಯಕ್ರಮದಲ್ಲಿ ಫೂಟ್ ಸೆಕ್ಯೂರ್ ಸಂಸ್ಥೆಯ ವೈದ್ಯ ಡಾ. ಪವನ ಬೆಲ್ಲಹಳ್ಳಿ, ಯಾದಗಿರಿ ವೈದ್ಯಕೀಯ ಕಾಲೇಜಿನ ನಿರ್ದೇಶಕ ಡಾ.ಸಂದೀಪ್, ಜಿಲ್ಲಾ ಶಸ್ತ್ರಜ್ಞೆ ಡಾ. ಅಸ್ನಾ ರುಕಿಯಾ ರಬಾ, ರೋಟರಿ ಕ್ಲಬ್ ಅಧ್ಯಕ್ಷ ಡಾ.ಅನಂತ ಚಿಂಚೋಳಿ, ಅಭ್ಯುದಯ ಸಂಸ್ಥೆಯ ಡಾ.ಭೀಮಾಶಂಕರ ಟೆಂಗಳಿ ಇದ್ದರು. ಜಿಮ್ಸ್ ನಿರ್ದೇಶಕ ಡಾ.ಉಮೇಶ ಎಸ್.ಆರ್ ಸ್ವಾಗತಿಸಿದರು. ಉಪ ವೈದ್ಯಕೀಯ ಅಧೀಕ್ಷಕ ಡಾ.ರೇವಣಸಿದ್ದ ಬಿ. ವಂದಿಸಿದರು. ಮಡಿವಾಳಪ್ಪ ನಿರೂಪಿಸಿದರು. ಜಿಮ್ಸ್ ವೈದ್ಯಕೀಯ ಅಧೀಕ್ಷಕ ಡಾ.ಶಿವಕುಮಾರ್ ಸಿ.ಆರ್ ಪ್ರಸ್ತಾವಿಕವಾಗಿ ಮಾತನಾಡಿ ಪ್ರಯಾಸ್ ಅಭಿಯಾನದ ಕುರಿತು ವಿವರಣೆ ನೀಡಿದರು.

ಬಾಗಲಕೋಟೆ ಉಪ ಚುನಾವಣೆ: ಬಿಜೆಪಿ ಪರ ಪ್ರಚಾರಕ್ಕೆ ಯತ್ನಾಳಗೆ ಸಿಕ್ಕಿತಾ ಸಮ್ಮತಿ?



ಬಾಗಲಕೋಟೆ,ಮಾ.31-

'ಬಿಜೆಪಿ ಉಚ್ಚಾಟಿತ ಶಾಸಕ ಬಸನಗೌಡ ಪಾಟೀಲ ಯತ್ನಾಳ ಬಾಗಲಕೋಟೆ ವಿಧಾನಸಭಾ ಕ್ಷೇತ್ರದ ಉಪಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿ ಪರ ಪ್ರಚಾರ ಮಾಡಲು ಬಿಜೆಪಿ ನಾಯಕರು ಪರೋಕ್ಷವಾಗಿ ಸಮ್ಮತಿ ನೀಡಿದ್ದಾರಾ' ಎಂಬ ಪ್ರಶ್ನೆ ಕ್ಷೇತ್ರದಲ್ಲಿ ಚರ್ಚೆಯಾಗುತ್ತಿದೆ.

ನಾಮಪತ್ರ ಸಲ್ಲಿಕೆ ದಿನ ಬೃಹತ್ ರ‍್ಯಾಲಿಯಲ್ಲಿ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ, ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಮತ್ತಿತರರು ಭಾಗವಹಿಸಿದ್ದರು.

ಬಿಜೆಪಿ ಕೆಲ ಕಾರ್ಯಕರ್ತರು ಮುಂದಿನ ಸಿಎಂ ಯತ್ನಾಳ ಎಂಬ ಭಿತ್ತಿಚಿತ್ರ ಪ್ರದರ್ಶಿಸಿದ್ದರು. ಕೂಡಲೇ ಕೆಲ ನಾಯಕರು ಅದನ್ನು ಕಸಿದುಕೊಂಡಿದ್ದರು.

ನಂತರ ದಿನಗಳಲ್ಲೂ ಯುವಕರ, ಹಿಂದುತ್ವದ ಪರ ಒಲವುಳ್ಳವರ ಮತ ಸೆಳೆಯಲು ಶಾಸಕ ಬಸನಗೌಡ ಪಾಟೀಲ ಯತ್ನಾಳ ಅವರನ್ನು ಪ್ರಚಾರಕ್ಕೆ ಕರೆಯಿಸಬೇಕು ಎಂಬ ಕೂಗು ಪಕ್ಷದ ವೇದಿಕೆಗಳಲ್ಲಿ ಕೇಳಿ ಬಂದಿತ್ತು. ಈ ಬಗ್ಗೆ ಪ್ರತಿಕ್ರಿಯಿಸಿದ್ದ ಶಾಸಕ ಯತ್ನಾಳ ಅವರೂ, ವೀರಣ್ಣ ಚರಂತಿಮಠ ಹಲವು ಸಂದರ್ಭಗಳಲ್ಲಿ ನೆರವು ನೀಡಿದ್ದಾರೆ. ನಮ್ಮಿಬ್ಬರದು ಬಹಳ ಹಳೆಯ ಸಂಬಂಧ. ಅವಶ್ಯಕತೆ ಬಿದ್ದರೆ ನೋಡೋಣ ಎಂದಿದ್ದರು.


ಪಕ್ಷದಿಂದ ಉಚ್ಚಾಟನೆಗೊಂಡಿರುವ ಯತ್ನಾಳ ಅವರನ್ನು ಪ್ರಚಾರಕ್ಕೆ ಕರೆಯಿಸುವುದು ಹೇಗೆ ಎಂಬ ಪ್ರಶ್ನೆ ಬಿಜೆಪಿ ನಾಯಕರನ್ನು ಕಾಡುತ್ತಿತ್ತು. ಕರೆಸದಿದ್ದರೆ, ಕಾರ್ಯಕರ್ತರ ವಿರೋಧ ಕಟ್ಟಿಕೊಳ್ಳಬೇಕಾಗುತ್ತದೆ. ಕರೆಯಿಸಿದರೆ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್. ಯಡಿಯೂರಪ್ಪ, ರಾಜ್ಯ ಘಟಕ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಅವರನ್ನು ಎದುರು ಹಾಕಿಕೊಳ್ಳಬೇಕಾಗುತ್ತದೆ ಎಂಬ ಸಂಕಟಕ್ಕೆ ಸಿಲುಕಿದ್ದರು.

ಜಿಲ್ಲೆಯ ಬಿಜೆಪಿ ನಾಯಕರು ಬಾಗಲಕೋಟೆ ಕ್ಷೇತ್ರದಲ್ಲಿ ಗೆಲುವಿನ ಯಾವುದೇ ಪ್ರಯತ್ನವನ್ನು ಬಿಡುವುದು ಬೇಡ. ಕೊನೆಗೂ ಬಿ.ವೈ. ವಿಜಯೇಂದ್ರ ಅವರನ್ನು ವ'ಂನ'ವ'ೊಲಿಸ'ಂವ'ಲ್ಲಿ ಯಶಸ್ವಿಯಾಗಿದ್ದಾರೆ ಎನ್ನಲಾಗಿದೆ. ಪಕ್ಷದ ಬ್ಯಾನರಡಿ ಮಾಡುವಂತಿಲ್ಲ. ಮುಖಂಡರೂ ಭಾಗವಹಿಸಬಾರದು ಎಂದು ಸೂಚಿಸಿದ್ದಾರೆ ಎಂದು ತಿಳಿದು ಬಂದಿದೆ.

ಶಾಸಕ ಯತ್ನಾಳ ಅವರು ನಮ್ಮ ನಾಯಕರು. ಅವರು ಪ್ರಚಾರಕ್ಕೆ ಬಂದರೆ ಶಕ್ತಿಯೇ. ಹಿಂದುತ್ವ ಗೆಲ್ಲಬೇಕು ಎಂದು ಮಾಜಿ ಸಚಿವ ಶ್ರೀರಾಮುಲು ಪ್ರತಿಕ್ರಿಯಿಸಿದ್ದರು.

ಯತ್ನಾಳ ಪ್ರಚಾರ ಕುರಿತ ಪ್ರಶ್ನೆಗೆ ಪ್ರತಿಕ್ರಿಯಿಸಿರುವ ವಿಜಯೇಂದ್ರ, ಕೆಲ ಕಾಂಗ್ರೆಸ್ ಮುಖಂಡರೇ ಬಿಜೆಪಿ ಅಭ್ಯರ್ಥಿಗೆ ಬೆಂಬಲ ನೀಡುತ್ತಿದ್ದಾರೆ. ಬಿಜೆಪಿ ಗೆಲುವಿಗೆ ಯಾರೇ ಸಹಕರಿಸಿದರೂ ಸ್ವಾಗತಿಸುವೆ ಎಂದಿದ್ದಾರೆ.

ಕ್ಷೇತ್ರದ ಅಭಿವೃದ್ಧಿಗೆ ಉಮೇಶಗೆ ಮತ ನೀಡಿ



ಬಾಗಲಕೋಟೆ,ಮಾ.31-

'ಉಚಿತ ವಿದ್ಯುತ್, ಅನ್ನಭಾಗ್ಯದಡಿ ಹೆಚ್ಚುವರಿ ಐದು ಕೆಜಿ ಅಕ್ಕಿ, ನಿರುದ್ಯೋಗಗಳಿಗೆ ಯುವನಿಧಿ -ಮೂಲಕ ಆರ್ಥಿಕ ನೆರವು ನೀಡುತ್ತಿದ್ದೇವೆ. ಕಾಂಗ್ರೆಸ್ ಅಭ್ಯರ್ಥಿ ಉಮೇಶ ಮೇಟಿಗೆ ಮತ ನೀಡಿ ಗೆಲ್ಲಿಸಿರಿ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಮನವಿ ಮಾಡಿದರು.

ಸುತಗುಂಡಾರ, ನಾಯನೇಗಲಿ, ರಾಂಪುರ, ಬೇವೂರದಲ್ಲಿ ಕಾಂಗ್ರೆಸ್ ಅಭ್ಯರ್ಥಿ ಉಮೇಶ ಮೇಟಿ ಪರ ಬಹಿರಂಗ ಪ್ರಚಾರ ಮಾಡಿದ ಅವರು, ಮೇಟಿ ಅವರು ವೈದ್ಯಕೀಯ ಕಾಲೇಜು ಕೇಳಿದ್ದರು. ಘೋಷಣೆ ಮಾಡಿದ್ದರೂ ಕಾರಣಾಂತರದಿಂದ ಮಾಡಲಾಗಿರಲಿಲ್ಲ. ಶಂಕುಸ್ಥಾಪನೆ ಮಾಡುವಾಗ ಅವರಿಲ್ಲದ್ದೂ ನೋವು ತಂದಿತು ಎಂದು ಸ್ಮರಿಸಿಕೊಂಡರು.

ಮುಂದಿನ ದಿನಗಳಲ್ಲಿ ಬಾಗಲಕೋಟೆಯಲ್ಲಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ, ಟ್ರಾಮಾ ಸೆಂಟರ್ ಮಾಡಲಿದ್ದೇವೆ. ಉಮೇಶ ಮೇಟಿ, ಎಚ್.ವೈ. ಮೇಟಿ ಅವರ ಮಾರ್ಗದಲ್ಲಿ ನಡೆಯಲ್ಲಿದ್ದಾರೆ ಎಂಬ ವಿಶ್ವಾಸವಿದೆ. ಇವರನ್ನು ವಿಧಾನಸಭೆಗೆ ಕಳುಹಿಸಿರಿ. ನಿಮ್ಮ ಪರವಾಗಿ ಧ್ವನಿ ಎತ್ತಲಿದ್ದಾರೆ ಎಂದು ಮನವಿ ಮಾಡಿದರು.

ನಮ್ಮದು ನುಡಿದಂತೆ ನಡೆಯುವ ಸರ್ಕಾರ. 2018ರಲ್ಲಿ 165 ಭರವಸೆ ನೀಡಿದ್ದೆವು. 158 ಈಡೇರಿಸಿದ್ದೆವು. ಸಾಲ ಮನ್ನಾ ಮಾಡಿದ್ದೇವೆ. ಬಡವರ, ದಲಿತರ, ಹಿಂದುಳಿದವರ ಪರ ಕೆಲಸ ಮಾಡುತ್ತಿದ್ದೇವೆ ಎಂದರು.

ಜಿಲ್ಲಾ ಉಸ್ತುವಾರಿ ಸಚಿವ ಆರ್.ಬಿ. ತಿಮ್ಮಾಪುರ ಮಾತನಾಡಿ, ಪ್ರತಿ ಟನ್ ಕಬ್ಬಿಗೆ ₹300 ಹೆಚ್ಚಿನ ಬೆಲೆ ನಿಗದಿ ಮಾಡಲಾಗಿದೆ. ಹಾಗೆಯೇ ಪ್ರತಿ ಟನ್ ಕಬ್ಬಿಗೆ ₹ 50 ಸರ್ಕಾರದಿಂದ ಧನಸಹಾಯ ನೀಡಲಾಗಿದೆ ಎಂದು ಹೇಳಿದರು. ರಾಜ್ಯದ ಅಭಿವೃದ್ಧಿ ಕಾರ್ಯಗಳು ಭರದಿಂದ ನಡೆದಿವೆ. ಬಾಗಲಕೋಟೆ ಕ್ಷೇತ್ರದ ಅಭಿವೃದ್ಧಿ ಮುಂದುವರಿಸಲು ಉಮೇಶ ಮೇಟಿ ಗೆಲ್ಲಿಸಬೇಕು ಎಂದು ಮನವಿ ಮಾಡಿದರು.

ಶಾಸಕ ವಿಜಯಾನಂದ ಕಾಶಪ್ಪನವರ ಮಾತನಾಡಿ, ಬಿಜೆಪಿಯಿಂದ ಇಬ್ಬರೂ ಲಿಂಗಾಯತ ಮುಖ್ಯಮಂತ್ರಿಯಾದರೂ ವೀರಶೈವ ಲಿಂಗಾಯತ ಅಭಿವೃದ್ಧಿ ನಿಗಮಕ್ಕೆ ಅನುದಾನ ನೀಡಿರಲಿಲ್ಲ. ಸಿದ್ದರಾಮಯ್ಯ ನಿಗಮಕ್ಕೆ ₹300 ಕೋಟಿ ಅನುದಾನ ನೀಡಿದ್ದಾರೆ ಎಂದರು.

ಉಮೇಶ ಮೇಟಿ ಗೆಲ್ಲಿಸಿದಾಗಲೇ ಅವರ ಆತ್ಮಕ್ಕೆ ಶಾಂತಿ ದೊರೆಯುತ್ತದೆ. ಬಿಜೆಪಿಯವರು ಸರ್ಕಾರಿ ವೈದ್ಯಕೀಯ ಕಾಲೇಜು ಬಗ್ಗೆ ಮಾತನಾಡುತ್ತಾರೆ. ಅವರು ಅಧಿಕಾರದಲ್ಲಿದ್ದಾಗ ಏಕೆ ಮಾಡಲಿಲ್ಲ ಎಂದು ಪ್ರಶ್ನಿಸಿದರು.

ಅಭ್ಯರ್ಥಿ ಉಮೇಶ ಮೇಟಿ ಮಾತನಾಡಿ, ಸುತಗುಂಡಾರ ಅಭಿವೃದ್ಧಿ ಮಾಡಿದ್ದಾರೆ. ರಾಂಪುರ ಜಿಲ್ಲಾ ಪಂಚಾಯಿತಿಯಲ್ಲಿ ಹೆಚ್ಚಿನ ಮತ ನೀಡುತ್ತಾ ಬಂದಿದ್ದೀರಿ. ಈಗಲೂ ಮತ ನೀಡಬೇಕು ಎಂದು ಮನವಿ ಮಾಡಿದರು.

ಸಚಿವರಾದ ಬೈರತಿ ಸುರೇಶ, ಶಿವಾನಂದ ಪಾಟೀಲ, ಶಾಸಕ ಬಿ.ಬಿ. ಚಿಮ್ಮನಕಟ್ಟಿ, ಜಿಲ್ಲಾ ಘಟಕದ ಅಧ್ಯಕ್ಷ ಎಸ್.ಜಿ. ನಂಜಯ್ಯನಮಠ, ಮಲ್ಲಿಕಾರ್ಜುನ ಮೇಟಿ ಇದ್ದರು.

ಮತದಾರರಿಂದ ಕಾಂಗ್ರೆಸ್‌ಗೆ ತಕ್ಕ ಪಾಠ



ಬಾಗಲಕೋಟೆ,ಮಾ.31-

ಮುಖ್ಯಮಂತ್ರಿ ಸೇರಿದಂತೆ ಯಾರೇ ಬಂದರೂ ಉಪಚುನಾವಣೆಯಲ್ಲಿ ಬಾಗಲಕೋಟೆ ಮತ್ತು ದಾವಣಗೆರೆ ಕ್ಷೇತ್ರಗಳಲ್ಲಿ ಬಿಜೆಪಿ ಬಹು ಅಂತರದಲ್ಲಿ ಗೆಲ್ಲಲಿದೆ. ಕಾಂಗ್ರೆಸ್ ವೋಟ್ ಬ್ಯಾಂಕ್ ಕುತಂತ್ರ ಅರ್ಥಮಾಡಿಕೊಂಡ -ಮತದಾರರು ತಕ್ಕಪಾಠ ಕಲಿಸಲಿದ್ದಾರೆ ಎಂದು ಬಿಜೆಪಿ ರಾಜ್ಯ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಹೇಳಿದರು.

ನಗರದ ದೀಪಂ ಕಾಲೊನಿಯಲ್ಲಿ ಬಿಜೆಪಿ ಅಭ್ಯರ್ಥಿ ವೀರಣ್ಣ ಚರಂತಿಮಠ ಪರವಾಗಿ ಮನೆ, ಮನೆಗಳಿಗೆ ತೆರಳಿ ಮತಯಾಚನೆ ಮಾಡಿ ಮಾತನಾಡಿದ ಅವರು, ಕಾರ್ಯಕರ್ತರು ಉತ್ಸಾಹದಿಂದ ಕೆಲಸ ಮಾಡುತ್ತಿದ್ದು, ಬಾಗಲಕೋಟೆ ಕ್ಷೇತ್ರ ರಣರಂಗವಾಗಿ ಬದಲಾಗಿದೆ. ಕಾಂಗ್ರೆಸ್ ದುರಾಡಳಿತಕ್ಕೆ ಮತದಾರರು ಸಂಪೂರ್ಣವಾಗಿ ಬೇಸತ್ತಿದ್ದಾರೆ ಎಂದರು.

ಮೂರು ವರ್ಷಗಳ ಕಾಂಗ್ರೆಸ್ ಆಡಳಿತದಲ್ಲಿ ರಾಜ್ಯದಲ್ಲಿ ಹಿಂದೂ ಕಾರ್ಯಕರ್ತರ ಅಪಮಾನ ಮತ್ತು ಸುಳ್ಳುಕೇಸ್ ದಾಖಲು ಪ್ರಕರಣಗಳು ಹೆಚ್ಚಾಗಿವೆ. ಬಾಗಲಕೋಟೆ ಸೇರಿದಂತೆ ವಿವಿಧೆಡೆ ಹಿಂದೂ ಮೆರವಣಿಗೆಗಳ ಮೇಲೆ ಕಲ್ಲು ತೂರಾಟಗಳು ನಡೆಯುತ್ತಿವೆ. ದೇಶದ್ರೋಹಿಗಳಿಗೆ ರಕ್ಷಣೆ ಕೊಡುತ್ತಿದ್ದಾರೆ. ಎಂದು ಆರೋಪಿಸಿದರು.

ದಲಿತರ ಮೇಲೆ ಹಲ್ಲೆಗಳು ನಡೆಯುತ್ತಿದ್ದರೂ ಸರ್ಕಾರ ತಲೆ ಕೆಡಿಸಿಕೊಳ್ಳುತ್ತಿಲ್ಲ. ಉದ್ಯೋಗ ಭರವಸೆ ನೀಡಿ ಒಂದೇ ಒಂದು ಹುದ್ದೆಯನ್ನು ಭರ್ತಿ ಮಾಡದೇ ಪ್ರತಿಭಟನೆ ಮಾಡುವ ಉದ್ಯೋಗ ಆಕಾಂಕ್ಷಿಗಳ ಮೇಲೆ ಲಾಠಿ ಪ್ರಹಾರ ಮಾಡಲಾಗುತ್ತಿದೆ ಎಂದು ಟೀಕಿಸಿದರು.


ಸಂಸದ ಗೋವಿಂದ ಕಾರಜೋಳ ಮಾತನಾಡಿ, ಕಾಂಗ್ರೆಸ್ ಚುನಾವಣೆಗೆ ಮೊದಲೇ ಸೋಲು ಖಚಿತವಾಗಿದ್ದು, ಅತಂತ್ರ ಸ್ಥಿತಿ ತಲುಪಿದೆ. ವೀರಣ್ಣ ಚರಂತಿಮಠರ ಅಭಿವೃದ್ಧಿ ಕಾರ್ಯಕ್ರಮಗಳ ಪ್ರಚಾರದ ಮುಂದೆ ಮುಖ್ಯಮಂತ್ರಿ ಪ್ರಚಾರ ಕೆಲಸ ಮಾಡುವುದಿಲ್ಲ ಎಂದರು.

ವಿಧಾನ ಪರಿಷತ್ ಸದಸ್ಯ ಪಿ.ಎಚ್ ಪೂಜಾರ ಮಾತನಾಡಿ, ಬಾಗಲಕೋಟೆ ಸಮಗ್ರ ಅಭಿವೃದ್ಧಿ ಚರಂತಿಮಠರಿಂದ ಮಾತ್ರ ಸಾಧ್ಯ. ಮುಳುಗಡೆಯಂತಹ ಗಂಭೀರ ಪರಿಸ್ಥಿತಿಯಲ್ಲೂ ಜನಸಾಮಾನ್ಯರಿಗೆ ತೊಂದರೆಯಾಗದಂತೆ ಕಾರ್ಯ ನಿರ್ವಹಿಸಿದ್ದಾರೆ ಎಂದು ಹೇಳಿದರು.

ಶಾಸಕ ಜಗದೀಶ ಗುಡಗುಂಟಿ, ಮಾಜಿ ಶಾಸಕ ಎಂ.ಕೆ ಪಟ್ಟಣಶೆಟ್ಟಿ, ಜೆಡಿಎಸ್ ಜಿಲ್ಲಾ ಅಧ್ಯಕ್ಷ ಹಣಮಂತ ಮಾವಿಮರದ, ಬಿಜೆಪಿ ಜಿಲ್ಲಾ ಅಧ್ಯಕ್ಷ ಶಾಂತಗೌಡ ಪಾಟೀಲ, ರಾಜ್ಯ ಕಾರ್ಯದರ್ಶಿ ಶರಣು ತಳ್ಳಿಕೇರಿ, ಜಿಲ್ಲಾ ಪ್ರದಾನ ಕಾರ್ಯದರ್ಶಿ ರಾಜು ನಾಯಕರ, ಸರಸ್ವತಿ ಕುರುಬರ, ಶೀವಲೀಲಾ ಪಟ್ಟಣಶೆಟ್ಟಿ ಇದ್ದರು.

ಶಿರೂರಿನಲ್ಲಿ ವಿಜಯೇಂದ್ರ ಅವರು ಭರ್ಜರಿ ರೋಡ್ ಶೋ ನಡೆಸಿ ಮತಯಾಚಿಸಿದರು.

ದಾವಣಗೆರೆ, ಬಾಗಲಕೋಟೆಯಲ್ಲಿ 50,000 ಮತಗಳ ಅಂತರದಲ್ಲಿ ಕಾಂಗ್ರೆಸ್‌ಗೆ ಗೆಲುವು ; ಬಸವರಾಜ ರಾಯರೆಡ್ಡಿ ವಿಶ್ವಾಸ



ಕುಕನೂರು,ಮಾ.31-

ದಾವಣಗೆರೆ ಹಾಗೂ ಬಾಗಲಕೋಟೆ ಉಪಚುನಾವಣೆಗಳಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳು 50 ಸಾವಿರ ಮತಗಳ ಅಂತರದಲ್ಲಿ ಗೆಲುವು ಸಾಧಿಸುವುದು ಖಚಿತ ಎಂದು ಸಿಎಂ ಆರ್ಥಿಕ ಸಲಹೆಗಾರ ಹಾಗೂ ಶಾಸಕ ಬಸವರಾಜ ರಾಯರೆಡ್ಡಿ ವಿಶ್ವಾಸವನ್ನು ವ್ಯಕ್ತಪಡಿಸಿದ್ದಾರೆ.

ಪಟ್ಟಣದಲ್ಲಿ ಮಾಧ್ಯಮಗಳ ಜೊತೆ ಮಾತನಾಡಿದ ಬಸವರಾಜ ರಾಯರೆಡ್ಡಿ, ರಾಜ್ಯದಲ್ಲಿ ಕಾಂಗ್ರೆಸ್ ಸರಕಾರದ ಜನಪರ ಯೋಜನೆಗಳು ಜನಮನ ಗೆದ್ದಿದ್ದು, ಅದಕ್ಕೆ ಪ್ರತಿಫಲವಾಗಿ ಉಪಚುನಾವಣೆಯಲ್ಲಿ ಕಾಂಗ್ರೆಸ್‌ಗೆ ಭರ್ಜರಿ ಬೆಂಬಲ ಸಿಗಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಬಿಜೆಪಿ ವಿರುದ್ಧ ವಾಗ್ದಾಳಿ ನಡೆಸಿದ ಅವರು, ''ಬಿಜೆಪಿ ಆಡಳಿತದಲ್ಲಿ ಅಭಿವೃದ್ಧಿ ಕಾಣಿಸಲಿಲ್ಲ. ಜನರು ಜಾತಿ-ಮತ ಆಧಾರದಲ್ಲಿ ಮತ ಹಾಕುವುದಿಲ್ಲ; ಅಭಿವೃದ್ಧಿ ಮತ್ತು ಜನಪರ ಆಡಳಿತದ ಆಧಾರದಲ್ಲಿ ತೀರ್ಮಾನ ಕೈಗೊಳ್ಳುತ್ತಾರೆ. ಅದಕ್ಕಾಗಿಯೇ ಎರಡೂ ಕ್ಷೇತ್ರಗಳಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳು ಭಾರೀ ಲೀಡ್‌ನಲ್ಲಿ ಗೆಲ್ಲಲಿದ್ದಾರೆ'' ಎಂದರು.

ಸಿಎಂ ಸಿದ್ದರಾಮಯ್ಯ ಅವರ ಆಡಳಿತವೇ ಉಪಚುನಾವಣೆಯ ತೀರ್ಪಾಗಲಿದೆ ಎಂದು ಹೇಳಿದ ಅವರು, ಇನ್ನೂ ಎರಡು ವರ್ಷಗಳ ಕಾಲ ರಾಜ್ಯಕ್ಕೆ ಸಿದ್ದರಾಮಯ್ಯ ಅವರೇ ನಾಯಕತ್ವ ನೀಡುವುದು ನಿಶ್ಚಿತ ಎಂದರು. ಡಿಸಿಎಂ ಡಿ.ಕೆ. ಶಿವಕುಮಾರ್ ನೇತೃತ್ವದಲ್ಲಿ 2028ರ ಚುನಾವಣೆಯೂ ಕಾಂಗ್ರೆಸ್ ಮತ್ತೊಮ್ಮೆ ಗೆಲುವು ಸಾಧಿಸಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಡೀಸೆಲ್ ದರ ವಿಚಾರವಾಗಿ ಪ್ರತಿಕ್ರಿಯಿಸಿದ ಅವರು, ರಾಜ್ಯದಲ್ಲಿ ಡೀಸೆಲ್ ದರ ಕಡಿತದ ಕುರಿತು ಅನಾವಶ್ಯಕ ಗೊಂದಲ ಸೃಷ್ಟಿಸಲಾಗುತ್ತಿದೆ. ಕಂಪೆನಿಗಳಿಗೆ 3 ರಷ್ಟು ರಿಯಾಯಿತಿ ನೀಡಲಾಗಿದ್ದು, ಇತರೆ ರಾಜ್ಯಗಳಿಗಿಂತ ಇಲ್ಲಿ ದರ ಕಡಿಮೆಯಾಗಿದೆ ಎಂದು ಸ್ಪಷ್ಟಪಡಿಸಿದರು.

ಈ ಸಂದರ್ಭದಲ್ಲಿ ಕಾಂಗ್ರೆಸ್ ಮುಖಂಡರಾದ ಸತ್ಯನಾರಾಯಣಪ್ಪ ಹರಪ್ಪನಹಳ್ಳಿ, ಯಂಕಣ್ಣಯರಾಶಿ, ಹಣಮಂತಪ್ಪ ಚಂಡೂರ್, ಸಿದ್ದಯ್ಯ ಕಳ್ಳಿಮಠ, ರಹಿಮಾನಸಾಬ ಮುಕಪ್ಪನವರ, ಗ್ಯಾರಂಟಿ ಯೋಜನೆ ಅಧ್ಯಕ್ಷ ಸಂಗಮೇಶ ಗುತ್ತಿ, ಪಟ್ಟಣ ಪಂಚಾಯತಿ ಅಧ್ಯಕ್ಷೆ ಲೀಲಾವತಿ ಮುಧೋಳ್, ಉಪಾಧ್ಯಕ್ಷ ಮಂಜುಳಾ ಕಲ್ಮನಿ ಉಪಸ್ಥಿತರಿದ್ದರು.



ಮೂರು ಪ್ರತ್ಯೇಕ ಕಳ್ಳತನ ಪ್ರಕರಣ: 11 ಆರೋಪಿಗಳ ಬಂಧನ

ಕಲಬುರಗಿ,ಮಾ.31-

ಶಹಾಬಾದ ನಗರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆದ ಮೂರು ಪ್ರತ್ಯೇಕ ಕಳ್ಳತನ ಪ್ರಕರಣಗಳನ್ನು ಭೇದಿಸಿದ ಪೊಲೀಸರು 11 ಆರೋಪಿಗಳನ್ನು ಬಂಧಿಸಿದ್ದು, ಒಟ್ಟು 10.85 ಲಕ್ಷ ಮೌಲ್ಯದ ಸ್ವತ್ತುಗಳನ್ನು ವಶಪಡಿಸಿಕೊಂಡಿದ್ದಾರೆ. ಮೂರು ಪ್ರತ್ಯೇಕ ಪ್ರಕರಣಗಳಲ್ಲಿ ಶಹಾಬಾದ್ ನಿವಾಸಿಗಳಾದ ಉಮೇರ ಅಲಿ, ಪೂರ್ಖಾನ ರಹೀಂಖಾನ್, ಆಸಿಫ್ ಬಾಬುಮೀಯಾ, ಪಾಶಾ ಮಹಿಬೂಬ ಹಾಗೂ ಭಂಕೂರಿನ ಸುಭಾಷ ಈರಣ್ಣ ಮಡಿವಾಳ, ಮರತೂರ ನಿವಾಸಿಗಳಾದ ಪ್ರಲ್ಹಾದ ಬಾಬು ಸಿಂಧೆ, ಪ್ರಲ್ಹಾದ ಪ್ರೇಮಕುಮಾರ್ ಕಂಬಾನೂರ, ಪ್ರಮೋದ್ ಪ್ರೇಮಕುಮಾರ್ ಕಂಬಾನೂರ ಹಾಗೂ ಪ್ರೀತಮ್ ಪ್ರಕಾಶ್ ಎಂಬ ಆರೋಪಿಗಳನ್ನು ಬಂಧಿಸಲಾಗಿದೆ.

ಮಾರ್ಚ್ 28ರ ರಾತ್ರಿ ದಂಡಗುಂಡ ಬಸವೇಶ್ವರ ಟ್ರೇಡಿಂಗ್ ಕಂಪೆನಿಯ ಗೋಡೌನ್‌ಗೆ ನುಗ್ಗಿದ ಕಳ್ಳರು ಕೀಲಿ ಮುರಿದು ಸುಮಾರು 2.40 ಲಕ್ಷ ಮೌಲ್ಯದ 40 ತೊಗರಿ ಚೀಲಗಳನ್ನು ಕಳ್ಳತನ ಮಾಡಿದ್ದರು. ಹೊನಗುಂಟಾ ಗ್ರಾಮದ ನಾಗಪ್ಪ ಮಾರ್ತಾಂಡಪ್ಪ ಗುಡಬಾ ಅವರು ನೀಡಿದ ದೂರಿನ ಮೇರೆಗೆ ಈ ಕುರಿತು ಪ್ರಕರಣ ದಾಖಲಿಸಿಕೊಂಡ ಪೊಲೀಸರು ವಿಶೇಷ ತಂಡ ರಚಿಸಿ 24 ಗಂಟೆಯೊಳಗೆ ಐವರು ಆರೋಪಿಗಳನ್ನು ಬಂಧಿಸಿದ್ದಾರೆ.

ಬಂಧಿತರಿಂದ ತೊಗರಿ ಚೀಲಗಳು, ಕೃತ್ಯಕ್ಕೆ ಬಳಸಿದ ಮಿನಿ ಗೂಡ್ಸ್ ವಾಹನ, ಹೊಂಡಾ ಅಕ್ಟಿವಾ ಸೇರಿ ಒಟ್ಟು 10.85 ಲಕ್ಷ ಮೌಲ್ಯದ ಸ್ವತ್ತುಗಳನ್ನು ವಶಪಡಿಸಿಕೊಳ್ಳಲಾಗಿದೆ. ಡಿವೈಎಸ್‌ಪಿ ಶಂಕರಗೌಡ ಪಾಟೀಲ್ ಅವರ ಮಾರ್ಗದರ್ಶನದಲ್ಲಿ ಪಿ.ಐ. ವನಂಜಕರ, ಪಿ.ಎಸ್.ಐ. ಶಾಮರಾಯ, ಪಿ.ಎಸ್.ಐ. ಚಂದ್ರಕಾಂತ, ಎ.ಎಸ್.ಐ. ಮಲ್ಲಿಕಾರ್ಜುನ ಹಾಗೂ ಸಿಬ್ಬಂದಿಯನ್ನು ಒಳಗೊಂಡ ತನಿಖಾ ತಂಡವು ಕ್ಷಿಪ್ರ ಕಾರ್ಯಾಚರಣೆ ನಡೆಸಿ ಆರೋಪಿಗಳನ್ನು ವಶಕ್ಕೆ ಪಡೆದು ನ್ಯಾಯಾಂಗ ಬಂಧನಕ್ಕೆ ಒಪ್ಪಿಸುವಲ್ಲಿ ಯಶಸ್ವಿಯಾಗಿದೆ.

ಪ್ರತ್ಯೇಕ ಪ್ರಕರಣಗಳನ್ನು ಪತ್ತೆ ಹಚ್ಚುವಲ್ಲಿ ಯಶಸ್ವಿಯಾದ ಪೊಲೀಸ್ ಅಧಿಕಾರಿ ಹಾಗೂ ಸಿಬ್ಬಂದಿಗೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅಡ್ಡೂರು ಶ್ರೀನಿವಾಸಲು ಅವರು ಅಭಿನಂದಿಸಿದ್ದಾರೆ.

ಶ್ರದ್ಧಾ, ಭಕ್ತಿಯಿಂದ ಮಹಾವೀರ ಜಯಂತಿ ಆಚರಣೆ



ಬೀದರ್,ಮಾ.31-

ಭಗವಾನ್ ಮಹಾವೀರರ 2,625ನೇ ಜಯಂತಿಯನ್ನು ನಗರ ಸೇರಿದಂತೆ ಜಿಲ್ಲೆಯಾದ್ಯಂತ ಶ್ರದ್ಧಾ, ಭಕ್ತಿ ಹಾಗೂ ಸಡಗರ ಸಂಭ್ರಮದಿಂದ ಸೋಮವಾರ ಆಚರಿಸಲಾಯಿತು.

ನಗರದ ಶಹಾಗಂಜ್ ರಸ್ತೆಯಲ್ಲಿರುವ ಶ್ರೀ ಚಂದ್ರಪ್ರಭ ದಿಗಂಬರ್ ಜೈನ ಕಲ್ಯಾಣ ಮತ್ತು ಚಾರಿಟಬಲ್ ಟ್ರಸ್ಟ್‌ನಿಂದ ಮಹಾವೀರ ದೇವಸ್ಥಾನದಲ್ಲಿ ಧಾರ್ಮಿಕ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ಜೈನ ಮಂದಿರವನ್ನು ವಿಶೇಷ ರೀತಿಯಲ್ಲಿ ಅಲಂಕರಿಸಿದ್ದರು. ಮಹಿಳೆಯರು ದೇಗುಲದ ಪರಿಸರದಲ್ಲಿ ರಂಗೋಲಿ ಬಿಡಿಸಿದ್ದರು. ಮಹಾವೀರರಿಗೆ ವಿಶೇಷ ರೀತಿಯಲ್ಲಿ ಪೂಜೆ ನೆರವೇರಿಸಿ, ಮಂತ್ರ ಪಠಿಸಿದರು. ಜಯಘೋಷ ಹಾಕಿದರು.

ಬಳಿಕ ಅಲಂಕರಿಸಿದ ವಾಹನದಲ್ಲಿ ಮಹಾವೀರರ ಭಾವಚಿತ್ರ ಇರಿಸಿ, ಪಲ್ಲಕ್ಕಿ ಹೊತ್ತುಕೊಂಡು, ಜೈನ ಧರ್ಮದ ಧ್ವಜಗಳನ್ನು ಹಿಡಿದುಕೊಂಡು ನಗರದ ಪ್ರಮುಖ ಮಾರ್ಗಗಳಲ್ಲಿ ಮೆರವಣಿಗೆ ಮಾಡಿದರು. ಹೆಣ್ಣುಮಕ್ಕಳು ತಲೆಯ ಮೇಲೆ ಕಲಶ ಹೊತ್ತುಕೊಂಡು ಹೆಜ್ಜೆ ಹಾಕಿದರು. ಕಿರಿಯರಿಂದ ಹಿರಿಯರವರೆಗೆ ಎಲ್ಲರೂ ಪಾಲ್ಗೊಂಡಿದ್ದರು. ಬಳಿಕ ಭಕ್ತರಿಗೆ ಪ್ರಸಾದ ವಿತರಿಸಲಾಯಿತು.

ಬೀದರ್ ತಾಲ್ಲೂಕಿನ ಕಮಠಾಣ ಗ್ರಾಮದ ಜೈನ ಮಂದಿರದಲ್ಲೂ ವಿಶೇಷ ಪೂಜೆ, ಪ್ರಾರ್ಥನೆ ಜರುಗಿತು.

ಜಿಲ್ಲಾಧಿಕಾರಿ ಕಚೇರಿಯಲ್ಲಿ ಆಚರಣೆ: ನಗರದ ಜಿಲ್ಲಾಧಿಕಾರಿ ಕಚೇರಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಹೆಚ್ಚುವರಿ ಜಿಲ್ಲಾಧಿಕಾರಿ ಶಿವಾನಂದ ಬಿ. ಕರಾಳೆ ಅವರು ಭಗವಾನ್ ಮಹಾವೀರರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಪುಷ್ಪನಮನ ಸಲ್ಲಿಸಿದರು.

ಸಮಾಜದ ಮುಖಂಡರಾದ ನರಸಿಂಹರಾಜ ಟಿಕ್ಕೆ, ಸಂತೋಷ್ ಹೊನ್ನಕುದುರೆ, ಅಶೋಕಕುಮಾರ್ ಬೊಗಾರ, ಸತ್ಯವಾನ್ ಬೋಗಾರ, ಸುಭಾಷ ಬೋಗಾರ, ನೇಮಿನಾಥ ಕಾರ್ಸ, ವೆಂಕಟರಾವ್ ಬೆಳಕೋಟಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಸಿದ್ರಾಮ ಸಿಂಧೆ ಸೇರಿದಂತೆ ಇತರರು ಉಪಸ್ಥಿತರಿದ್ದರು.

ಒಂದನೇಯ ಪುಟದಿಂದ

ಭಗವಾನ್ ಮಹಾವೀರರ ಶಾಂತಿ, ಸೌಹಾರ್ದತೆ ಸಂದೇಶಗಳು ಇಂದಿಗೂ ಪ್ರಸ್ತುತ: ಡಾ.ಹಂಪಣ್ಣ ಸಜ್ಜನ್

ಜೈನ್ ಭವನದಿಂದ ಆರಂಭವಾದ ಮೆರವಣಿಗೆಯಲ್ಲಿ ಸಮಾಜದ ನೂರಾರು ಜನತೆ ಪಾಲ್ಗೊಂಡು ಶಾಂತಿ, ಸಹಿಷ್ಣುತೆ ಹಾಗೂ ಅಹಿಂಸೆಯ ಸಂದೇಶ ಸಾರಿದರು.

ಈ ವೇಳೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಾದ ಅರುಣಾಂಗ್ಶು ಗಿರಿ., ಜಿಲ್ಲಾ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿಗಳಾದ ಕುಮಾರ ಸ್ವಾಮಿ, ರಾಯಚೂರು ತಹಶೀಲ್ದಾರ್ ಸುರೇಶ ವರ್ಮಾ, ರಾಯಚೂರು ಮಹಾನಗರ ಪಾಲಿಕೆ ಸಮಿತಿ ಕಾರ್ಯದರ್ಶಿ ಕೃಷ್ಣಾ ಶಾವಂತಗೇರಾ, ಸಮಾಜದ ಪ್ರಮುಖರಾದ ಪ್ರಕಾಶ, ಕಿಶೋರ್, ಮಹಾವೀರ ಹರದರ, ಪ್ರಖರಾಜ, ಅಶ್ವಿನ ಭಾಟಿಯಾ, ಮೋಹನಲಾಲ್, ರಂಜಿತ್ ಕಟಾರಿಯಾ, ರಾಜುಭಾಯಿ ದೇಸಾಯಿ, ಮನ್ನೂಬಾಯಿ, ಅಶೀಕ ಲೋಧ್ರಾ ಸೇರಿದಂತೆ ಇತರರು ಇದ್ದರು.

ದಂಡಪ್ಪ ಬಿರಾದಾರ್ ನಿರೂಪಿಸಿದರು. ಅಶೋಕ ಕುಮಾರ್ ಜೈನ್ ವಂದಿಸಿದರು.

ಒಳ ಮೀಸಲಾತಿ ವರ್ಗೀಕರ: ರಾಜ್ಯ ಸರ್ಕಾರಕ್ಕೆ ಎಚ್ಚರಿಕೆ

ಸಮುದಾಯಗಳಿಗೆ ಲಾಭವಾಗುವುದಿಲ್ಲ. ಆದ್ದರಿಂದ ಸಮಾನ ಹಂಚಿಕೆ ಹಾಗೂ ಕ್ರೀಮಿ ಲೇಯರ್ ಜಾರಿ ಅಗತ್ಯವಿದೆ ಎಂದು ಅವರು ಒತ್ತಾಯಿಸಿದರು.

ಇದೇ ವೇಳೆ ವರ್ಗೀಕರಣದ ಪರಿಣಾಮವಾಗಿ ಶಿಕ್ಷಣ ಹಾಗೂ ಉದ್ಯೋಗ ನೇಮಕಾತಿ ಪ್ರಕ್ರಿಯೆಗಳು ವಿಳಂಬವಾಗುತ್ತಿರುವುದನ್ನು ಉಲ್ಲೇಖಿಸಿ, ಇತರೆ ವರ್ಗಗಳ ನೇಮಕಾತಿಗಳನ್ನು ತಕ್ಷಣ ಭರ್ತಿ ಮಾಡಬೇಕು ಎಂದು ಆಗ್ರಹಿಸಿದರು. ಜೊತೆಗೆ ಸಾಮಾನ್ಯ ವರ್ಗದ ಮೀಸಲಾತಿಯಲ್ಲಿಯೂ ಪರಿಶಿಷ್ಟ ಜಾತಿಯ ಅಭ್ಯರ್ಥಿಗಳಿಗೆ ಅವಕಾಶ ನೀಡಬೇಕು ಎಂದು ಒತ್ತಾಯಿಸಿದರು.

ಮಾದಿಗ ಸಮಾಜದ ಕೆಲವು ನಾಯಕರು ಅಧಿಕಾರ ಪಡೆದ ಬಳಿಕ ಸಮುದಾಯದ ಅಭಿವೃದ್ಧಿಯನ್ನು ಮರೆತಿದ್ದಾರೆ ಎಂಬ ಆರೋಪವೂ ಈ ವೇಳೆ ಕೇಳಿಬಂದಿತು.

ಸುದ್ದಿಗೋಷ್ಠಿಯಲ್ಲಿ ಹುಸೇನ್ ಬಾಷಾ ಪಲಕನಮರಡಿ ಹಾಗೂ ನರಸಿಂಹ ಗಧಾರ ಸೇರಿದಂತೆ ಹಲವು ಮುಖಂಡರು ಭಾಗವಹಿಸಿದ್ದರು.

ಜೂಜಾಟ,ಮಾದಕ ದಂಧೆ ಹೆಚ್ಚಳ: ಕಠಿಣ ಕ್ರಮಕ್ಕೆ ಕನ್ನಡ ಸೇನೆಯ ಆಗ್ರಹ

ತಾಲೂಕುಗಳಲ್ಲಿ ಪೊಲೀಸ್ ಇಲಾಖೆ ಹೆಚ್ಚಿನ ಎಚ್ಚರಿಕೆ ವಹಿಸಿ ರಾತ್ರಿ ವೇಳೆ ಗಸ್ತು ಹೆಚ್ಚಿಸಬೇಕು. ಕಳ್ಳತನ ಪ್ರಕರಣಗಳು ಹೆಚ್ಚಾಗಿರುವ ಪ್ರದೇಶಗಳಲ್ಲಿ ವಿಶೇಷ ನಿಗಾವಹಿಸಿ, ಸಾರ್ವಜನಿಕ ಸ್ಥಳಗಳಲ್ಲಿ ಪೊಲೀಸರ ನಿಯೋಜನೆ ಮಾಡಬೇಕು ಎಂದು ಮನವಿಯಲ್ಲಿ ಉಲ್ಲೇಖಿಸಲಾಗಿದೆ.

ಜೂಜಾಟ ಕೇಂದ್ರಗಳು ಹಾಗೂ ಅಕ್ರಮ ಕ್ಲಬ್‌ಗಳನ್ನು ಪತ್ತೆ ಮಾಡಿ ಕಾನೂನು ಪ್ರಕಾರ ಕಠಿಣ ಕ್ರಮ ಕೈಗೊಳ್ಳಬೇಕು. ಕಾಲೇಜುಗಳ ಸುತ್ತಮುತ್ತ ಗಾಂಜಾ ಸೇರಿದಂತೆ ಮಾದಕ ದ್ರವ್ಯಗಳ ಮಾರಾಟವನ್ನು ಸಂಪೂರ್ಣವಾಗಿ ನಿಲ್ಲಿಸಲು ವಿಶೇಷ ಕಾರ್ಯಾಚರಣೆ ನಡೆಸಬೇಕು ಎಂದು ಆಗ್ರಹಿಸಲಾಗಿದೆ.

ಪೊಲೀಸ್ ಇಲಾಖೆ ಈ ವಿಷಯದಲ್ಲಿ ತಕ್ಷಣ ಕ್ರಮ ಕೈಗೊಳ್ಳದಿದ್ದಲ್ಲಿ ಜಿಲ್ಲೆಯ ಎಲ್ಲಾ ತಾಲೂಕು ಕೇಂದ್ರಗಳಲ್ಲಿ ಹೋರಾಟ ಹಮ್ಮಿಕೊಳ್ಳಲಾಗುವುದು ಎಂದು ಕನ್ನಡ ಸೇನೆ ಎಚ್ಚರಿಕೆ ನೀಡಿದೆ. ಈ ಸಂದರ್ಭದಲ್ಲಿ ಕನ್ನಡ ಸೇನೆ ಜಿಲ್ಲಾಧ್ಯಕ್ಷ ಎಂ. ಬಸವರಾಜ ಸೇರಿದಂತೆ ಹಲವು ಪದಾಧಿಕಾರಿಗಳು ಉಪಸ್ಥಿತರಿದ್ದರು.

ವಿಶ್ವ ಮಹಿಳಾ ದಿನಾಚರಣೆ: ಮಹಿಳಾ ನೌಕರರ ಕ್ರೀಡಾಕೂಟ

ನಡೆಸಲಾಯಿತು.

ಕಾರ್ಯಕ್ರಮದಲ್ಲಿ ಛಾಯದೇವಿ ಮಾತೆ, ಜಯಶ್ರೀ, ವಿಜಯಲಕ್ಷ್ಮೀ, ಧನಲಕ್ಷ್ಮೀ, ಮಹಿನುಲ್ ಹಕ್, ಮಲ್ಲೇಶ್ ನಾಯಕ್, ರಾಜಶೇಖರ್ ದಿನ್ನಿ, ರಾಜಶೇಖರ್ ನಾಯಕ್, ಪರುಶುರಾಮ್ ಹುಜರಾತಿ, ರತ್ನಾ, ಭೀಮೇಶ್ ನಾಯಕ್ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಈ ಸಂದರ್ಭದಲ್ಲಿ ನಿಂಬೆಕಾಯಿ-ಚಮಚ ಓಟ, ನೀರು ತುಂಬಿಸುವ ಆಟ, ಹಗ್ಗಜಗ್ಗಾಟ, ರಂಗೋಲಿ, ಶಟಲ್ ಬಾಲ್, ಬಲೂನ್ ಊದುವ ಸ್ಪರ್ಧೆ, ಚದುರಂಗ, ಜಾನಪದ ಹಾಡು ಹಾಗೂ ಭಾವಗೀತೆ ಸೇರಿದಂತೆ ಹಲವು ಸ್ಪರ್ಧೆಗಳು ನಡೆದವು. ಕೊನೆಯಲ್ಲಿ, ಕಾರ್ಯಕ್ರಮದಲ್ಲಿ ಭಾಗವಹಿಸಿದ ಎಲ್ಲಾ ಮಹಿಳಾ ನೌಕರರು ಹಾಗೂ ಸಂಘದ ಪದಾಧಿಕಾರಿಗಳಿಗೆ ಧನ್ಯವಾದಗಳನ್ನು ಅರ್ಪಿಸಲಾಯಿತು.

ರಟಕಲ್ ವಿರಕ್ತ ಮಠದಲ್ಲಿ ಪಟ್ಟಾಧಿಕಾರ ಮಹೋತ್ಸವ: ಪೋಸ್ಟರ್ ಬಿಡುಗಡೆ



ಕಲಬುರಗಿ,ಮಾ.31-

ಕಾಳಗಿ ತಾಲೂಕಿನ ಸುಕ್ಷೇತ್ರ ರಟಕಲ್‌ನ ವಿರಕ್ತ ಮಠದಲ್ಲಿ ನಿಯೋಜಿತ ಉತ್ತರಾಧಿಕಾರಿಯಾದ ಪೂಜ್ಯ ಶ್ರೀ ನೀಲಕಂಠ ದೇವರವರ ಪಟ್ಟಾಧಿಕಾರ ಮಹೋತ್ಸ ವದ ಅಂಗವಾಗಿ ಸೋಮವಾರ ವಾಲ್ ಪೋಸ್ಟರ್ ಬಿಡುಗಡೆ ಕಾರ್ಯಕ್ರಮ ನೆರವೇರಿತು.

ಮಠದಲ್ಲಿ ನಡೆದ ಕಾರ್ಯಕ್ರಮದಲ್ಲಿ ಪೂಜ್ಯಶ್ರೀ ಡಾ. ಶಿವಾನಂದ ಮಹಾಸ್ವಾಮಿಗಳು (ಹುಲಸೂರು ಮಠ), ಪೂಜ್ಯಶ್ರೀ ಚಿಕ್ಕ ಗುರುನಂಜೇಶ್ವರ ಮಹಾಸ್ವಾಮಿಗಳು (ಭರತನೂರ), ಪೂಜ್ಯಶ್ರೀ ರೇವಣಸಿದ್ದ ಶಿವಾಚಾರ್ಯರು (ರಟಕಲ್), ವಿರಕ್ತಮಠದ ನಿಯೋಜಿತ ಉತ್ತರಾಧಿಕಾರಿ ಪೂಜ್ಯಶ್ರೀ ನೀಲಕಂಠ ದೇವರು, ಶ್ರೀ ಸಿದ್ದ ಶಿವಯೋಗಿ ರೇವಣಸಿದ್ದ ಶರಣರು (ಗೌರಿಗುಡ್ಡ) ದಿವ್ಯ ಸಾನಿಧ್ಯ ವಹಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಮುಖಂಡರು, ಬಸವಾದಿ ಶರಣರ ವಚನ ಪರಂಪರೆಯನ್ನು ಮುಂದುವರಿಸುತ್ತಿರುವ ಮಠಗಳು ಸಮಾಜದಲ್ಲಿ ಜ್ಞಾನ ದಾಸೋಹ ಮತ್ತು ಅನ್ನದಾಸೋಹಗಳ ಮೂಲಕ ಮಹತ್ವದ ಸೇವೆ ಸಲ್ಲಿಸುತ್ತಿವೆ ಎಂದು ಅಭಿಪ್ರಾಯಪಟ್ಟರು. ರಟಕಲ್ ಶ್ರೀ ಮುರಗೇಂದ್ರ ಶಿವಯೋಗಿಗಳ ವಿರಕ್ತ ಮಠವು ಭಕ್ತರ ಪಾಲಿಗೆ ಕಾಮಧೇನು-ಕಲ್ಪವೃಕ್ಷದಂತಿದ್ದು, ಸಂಕಷ್ಟದಲ್ಲಿರುವವರಿಗೆ ಆಶ್ರಯ ನೀಡುತ್ತಿರುವ ಪುಣ್ಯದ ತಾಣವಾಗಿದೆ ಎಂದು ಹೇಳಿದರು.

ಮಠದ ಐತಿಹಾಸಿಕ ಪರಂಪರೆಯನ್ನು ಸ್ಮರಿಸಿದ ಅವರು, ಲಿಂ. ಶ್ರೀ ರುದ್ರಮುನಿ ಶಿವಯೋಗಿಗಳು, ಲಿಂ. ಶ್ರೀ ಮುರಗೇಂದ್ರ ಶಿವಯೋಗಿಗಳು, ಲಿಂ. ಶ್ರೀ ನೀಲಕಂಠ ಮಹಾಸ್ವಾಮಿಗಳು ಹಾಗೂ ಲಿಂ. ಶ್ರೀ ಸಿದ್ಧರಾಮ ಮಹಾಸ್ವಾಮಿಗಳ ಸೇವೆಯನ್ನು ಸ್ಮರಿಸಿದರು.

ಪಟ್ಟಾಧಿಕಾರ ಸ್ವಾಗತ ಸಮಿತಿಯ ಅಧ್ಯಕ್ಷರಾದ ಚಿಂಚೋಳಿ ಶಾಸಕ ಡಾ.ಅವಿನಾಶ್ ಜಾಧವ್, ವಿಧಾನ ಪರಿಷತ್ ಸದಸ್ಯ ಜಗದೇವ ಗುತ್ತೇದಾರ್, ವಿಜಯಕುಮಾರ್ ಚೆಂಗಟಿ, ಶಿವರಾಜ್ ಪಾಟೀಲ್ ಗೋಣಗಿ, ಚಿಂತನ ರಾಥೋಡ, ಬಸವರಾಜ್ ಚೌಕಾ, ಸಿದ್ದಯ್ಯ ಸ್ವಾಮಿ ಕಿಣ್ಣಿ, ಮಲ್ಲಣ್ಣ ಬೈರಪ, ಮಲೆನಾಥ ಮುಚ್ಚಟ್ಟಿ, ಸಂತೋಷ್ ಹಂದ್ರಳ್ಳಿ, ರಾಚಯ್ಯ ಕಿಣ್ಣಿ, ಚಂದ್ರಕಾಂತ ಭೀಮಳ್ಳಿ, ಚಂದ್ರಕಾಂತ್ ಸೀಗಿ, ಶರಣು ಬೈರಪ್, ಮಾನಶೆಟ್ಟಿ ಸೀಗಿ, ನೀಲಕಂಠ ಪಾಟೀಲ್, ರವಿ ಬುಳ್ಳ, ಆಕಾಶ್ ಸಾಲಿಮಠ, ವಿನೋದ್ ಸಿಗಿ, ವೀರೇಶ್ ಬುಕ್ಕಟಗಿ, ಬಸವರಾಜ್ ತಳವಾರ್, ರವಿ ಕೆಣ್ಣಿ, ರಸೂಲ್ ಕೋರಬಾ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಕಲಬುರಗಿ ನೀಲಹಳ್ಳಿಯಲ್ಲಿ ನೂತನ ಶಾಲಾ ಕೊಠಡಿಗಳ ಲೋಕಾರ್ಪಣೆ



ಸೇಡಂ,ಮಾ.31-

ಗ್ರಾಮೀಣ ಭಾಗದ ಸರಕಾರಿ ಶಾಲೆಗಳನ್ನು ಖಾಸಗಿ ಶಾಲೆಗಳಿಗೆ ಪೈಪೋಟಿ ನೀಡುವಂತೆ ಹೈಟೆಕ್ ಆಗಿ ಅಭಿವೃದ್ಧಿಪಡಿಸುವುದು ಹಾಗೂ ನಮ್ಮ ಭಾಗದ ಮಕ್ಕಳಿಗೆ ಉದ್ಯೋಗಾಧಾರಿತ ತಾಂತ್ರಿಕ ಶಿಕ್ಷಣ ನೀಡುವುದು ಸರಕಾರದ ಸಂಕಲ್ಪವಾಗಿದೆ ಎಂದು ವೈದ್ಯಕೀಯ ಶಿಕ್ಷಣ ಹಾಗೂ ಕೌಶಲ್ಯಾಭಿವೃದ್ಧಿ ಸಚಿವರಾದ ಡಾ. ಶರಣಪ್ರಕಾಶ್ ಪಾಟೀಲ್ ಹೇಳಿದರು. ತಾಲೂಕಿನ ನೀಲಹಳ್ಳಿ ಗ್ರಾಮದಲ್ಲಿ ಸರಕಾರಿ ಪ್ರಾಥಮಿಕ ಶಾಲೆಯ ಆವರಣದಲ್ಲಿ ನೂತನವಾಗಿ ನಿರ್ಮಿಸಿದ ಶಾಲಾ ಕೊಠಡಿಗಳನ್ನು ಲೋಕಾರ್ಪಣೆಗೊಳಿಸಿ ಮಾತನಾಡಿದ ಸಚಿವ ಡಾ.ಶರಣಪ್ರಕಾಶ್ ಪಾಟೀಲ್, ನೀಲಹಳ್ಳಿ ಗ್ರಾಮವು ಕೇವಲ ಪ್ರಾಥಮಿಕ ಶಿಕ್ಷಣಕ್ಕೆ ಸೀಮಿತವಾಗದೆ, ತಾಂತ್ರಿಕ ಶಿಕ್ಷಣದ ಕೇಂದ್ರವಾಗಲಿದೆ. ಈಗಾಗಲೇ ಇಲ್ಲಿ ಐಟಿಐ ಕಾಲೇಜು ಕಾರ್ಯನಿರ್ವಹಿಸುತ್ತಿದೆ. ಇದರ ಜೊತೆಗೆ ಸುಮಾರು 74 ಕೋಟಿ ರೂಪಾಯಿ ವೆಚ್ಚದಲ್ಲಿ ಅತ್ಯಾಧುನಿಕ ಜಿಟಿಟಿಸಿ ಡಿಪ್ಲೊಮಾ ಕಾಲೇಜು ನಿರ್ಮಾಣವಾಗುತ್ತಿದೆ. ಇದಕ್ಕಾಗಿ ಈಗಾಗಲೇ 5 ಎಕರೆ ಜಮೀನು ಮಂಜೂರಾಗಿದ್ದು, ಮುಂದಿನ ಒಂದು ತಿಂಗಳೊಳಗೆ ಕಟ್ಟಡ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಲಾಗುವುದು ಎಂದರು.

ಕೃಷಿಕ ಸಮಾಜದ ರಾಜ್ಯ ಪ್ರತಿನಿಧಿ ಬಸವರಾಜ ಪಾಟೀಲ್ ಊಡಗಿ, ಗ್ಯಾರಂಟಿ ಅನುಷ್ಠಾನ ಸಮಿತಿ ಹಾಗೂ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಶಿವಶರಣರೆಡ್ಡಿ ಪಾಟೀಲ್, ತಹಶೀಲ್ದಾರ್ ಶ್ರೀಯಾಂಕ್ ಧನಶ್ರೀ, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಯ ಎಇಇ ವಿಶ್ವನಾಥ್, ಕೃಷಿ ಸಮಾಜದ ತಾಲೂಕಾಧ್ಯಕ್ಷ ಬಸವರಾಜ ರೇವಗೊಂಡ, ನಗರ ಯೋಜನಾ ಪ್ರಾಧಿಕಾರದ ಅಧ್ಯಕ್ಷ ವಿಶ್ವನಾಥ್ ಪಾಟೀಲ್ ಬೋಮ್ನಳ್ಳಿ, ಜಗದೇಪ್ಪ ಪಾಟೀಲ್ ಕೋಂಕನಳ್ಳಿ, ಮಹೇಶ್ ಪಾಟೀಲ್ ತರನಳ್ಳಿ, ಸತೀಶ್ ಪೂಜಾರಿ, ರಾಮಯ್ಯ ಪೂಜಾರಿ, ಚನ್ನಬಸಪ್ಪ ಹಾಗರಗಿ, ಶ್ರೀನಿವಾಸ ಸಂಗಾವಿ, ಶರಣಪ್ಪ ಜಮಾದಾರ, ಶ್ರವಣಕುಮಾರ ಪಂತುಲು, ಮಂಜುನಾಥ ಸಾಹು, ಬಸವರಾಜ ಚಿಂತಾಮಣಿ, ರವಿ ಸಾಹು ಹಾಗೂ ಶ್ರೀನಿವಾಸ ಪ್ಯಾಟಿ ಸೇರಿದಂತೆ ಹಲವರು ಉಪಸ್ಥಿತರಿದ್ದರು.



ವಿಜಯನಗರ ಜಿಲ್ಲೆಯ ವಿವಿಧೆಡೆ ಬೈಕ್ ಕಳ್ಳತನ ನಡೆಸುತ್ತಿದ್ದ ಆರೋಪಿಯ ಬಂಧನ: 12.81 ಲಕ್ಷ ಮೌಲ್ಯದ 14 ಬೈಕ್‌ಗಳು ವಶಕ್ಕೆ

ವಿಜಯನಗರ, ಮಾ.31-

ಜಿಲ್ಲೆಯ ವಿವಿಧೆಡೆ ಬೈಕ್‌ಗಳನ್ನು ಕಳ್ಳತನ ಮಾಡುತ್ತಿದ್ದ ಆರೋಪಿಯನ್ನು ಬಂಧಿಸಿದ ಪೊಲೀಸರು 12 ಲಕ್ಷ 81 ಸಾವಿರ ಮೌಲ್ಯದ ವಿವಿಧ ಕಂಪೆನಿಗಳ 14 ಬೈಕ್‌ಗಳನ್ನು ವಶಕ್ಕೆ ಪಡೆದಿದ್ದಾರೆ.

ಫೆಬ್ರವರಿ 15ರಂದು ವೆಂಕಟೇಶ್ ಎಂಬವರ ಬೈಕ್ ಕಳ್ಳತನವಾಗಿತ್ತು. ಈ ಸಂಬಂಧ ಪಟ್ಟಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು.

ಮಾರ್ಚ್ 30ರ ಬೆಳಗಿನ ಜಾವ ಕನಕದಾಸ ವೃತ್ತದಲ್ಲಿ ಗಸ್ತು ಸಂದರ್ಭದಲ್ಲಿ ಅನುಮಾನಾಸ್ಪದವಾಗಿ ತಿರುಗಾಡುತ್ತಿದ್ದ ವ್ಯಕ್ತಿಯನ್ನು ವಶಕ್ಕೆ ಪಡೆದು ಪೊಲೀಸರು ವಿಚಾರಣೆ ನಡೆಸಿದಾಗ ಆತ ಬೈಕ್ ಕಳ್ಳತನ ನಡೆಸಿರುವುದನ್ನು ಒಪ್ಪಿಕೊಂಡಿದ್ದಾನೆ.

ಬಂಧಿತನನ್ನು ಮುನಿರಾಬಾದ್ ನಿವಾಸಿ ಮೆಹಬೂಬ್ (37) ಎಂದು ಗುರುತಿಸಲಾಗಿದೆ. ಆತ ಹೊಸಪೇಟೆ, ಮುನಿರಾಬಾದ್, ಬಳ್ಳಾರಿ, ಗದಗ, ಸಂಡೂರು, ಗಂಗಾವತಿ, ಕಂಪ್ಲಿ ಹಾಗೂ ಮಂಡ್ಯ ಸೇರಿದಂತೆ ವಿವಿಧೆಡೆ ಬೈಕ್‌ಗಳನ್ನು ಕಳ್ಳತನ ಮಾಡಿರುವುದು ವಿಚಾರಣೆಯ ವೇಳೆ ಬಹಿರಂಗವಾಗಿದೆ.

ಪೊಲೀಸರು ಬಂಧಿತನಿಂದ 14 ಬೈಕ್‌ಗಳನ್ನು ವಶಪಡಿಸಿಕೊಂಡಿದ್ದಾರೆ.

ಈ ಕಾರ್ಯಾಚರಣೆಯಲ್ಲಿ ಪಿಎಸ್ಐ ಪರಮೇಶ್ವರಪ್ಪ, ರಾಜಶೇಖರ್ ಹಾಗೂ ಸಿಬ್ಬಂದಿಗಳಾದ ರಾಘವೇಂದ್ರ, ಲಿಂಗರಾಜ್, ಚಂದ್ರಶೇಖರ್ ಕೊಟ್ರೇಶ್, ಪಕ್ಕೀರಪ್ಪ, ದೇವೇಂದ್ರ ಮತ್ತು ಶಿವಪ್ಪಜಿ ಭಾಗವಹಿಸಿದ್ದರು.

ಗ್ಯಾಸ್ ಸಿಲಿಂಡರ್ ಎಜೆನ್ಸಿ ಮುಂದೆ ನೋ ಸ್ಟಾಕ್ ಬೋರ್ಡ್: ರೊಚ್ಚಿಗೆದ್ದ ಗ್ರಾಹಕರು

ಹಾವೇರಿ: ಹಾವೇರಿಯಲ್ಲಿ ಅಡುಗೆ ಅನಿಲ ಸಮಸ್ಯೆ ದಿನದಿಂದ ದಿನಕ್ಕೆ ಬಿಗಡಾಯಿಸಲಾರಂಭಿಸಿದೆ. ಮೊದ ಮೊದಲು ವಾಣಿಜ್ಯ ಸಿಲಿಂಡರ್‌ಗಳ ಕೊರತೆ ಕಂಡುಬಂದರೆ ಇದೀಗ ಜನಸಾಮಾನ್ಯರು ಬಳಸುವ ಅಡುಗೆ ಅನಿಲ ಸಿಲಿಂಡರ್ ಕೊರತೆ ಕಾಣಿಸಲಾರಂಭಿಸಿದೆ. ಪರಿಣಾಮ ಹಾವೇರಿ ಹೆಚ್‌ಪಿ ಸಿಲಿಂಡರ್ ಪೂರೈಸುವ ಎಜೆನ್ಸಿ ಸೋಮವಾರ ನೋ ಸ್ಟಾಕ್ ಎಂದು ಬೋರ್ಡ್ ಹಾಕಿದೆ.

ಇದರಿಂದಾಗಿ ಸಿಲಿಂಡರ್ ತೆಗೆದುಕೊಳ್ಳಲು ದೂರ ದೂರದ ಗ್ರಾಮಗಳಿಂದ ಬಂದಿದ್ದ ಗ್ರಾಹಕರು ಪರದಾಡುವಂತಾಯಿತು. ಪ್ರತಿದಿನ ಬಂದಾಗಲೆಲ್ಲಾ ಒಂದೊಂದು ಕಾರಣ ಹೇಳುತ್ತಿದ್ದ ಎಜೆನ್ಸಿ ಸಿಬ್ಬಂದಿ ನೋ ಸ್ಟಾಕ್ ಹಾಕಿದ್ದು ಗ್ರಾಹಕರನ್ನು ರೊಚ್ಚಿಗೆಬ್ಬಿಸಿತು. ಮನೆಯಲ್ಲಿ ರೋಗಿಗಳು, ವೃದ್ದರು, ಬಾಣಂತಿಯರಿದ್ದಾರೆ. ಅವರಿಗೆ ಅಡುಗೆ ಮಾಡಿ ಹಾಕಲು ಸಿಲಿಂಡರ್ ಬೇಕು. ಆದರೆ ಇಲ್ಲಿ ಬಂದರೆ ಈ ರೀತಿ ನೋ ಸ್ಟಾಕ್ ಬೋರ್ಡ್ ಹಾಕಿದ್ದಾರೆ ಎಂದು ಎಜೆನ್ಸಿ ವಿರುದ್ಧ ಹಿಡಿಶಾಪ ಹಾಕಿದರು.

ಈ ಮೊದಲು ಸಿಲಿಂಡರ್ ಬುಕ್ ಮಾಡಿದ ಕೆಲ ಗಂಟೆಗಳಲ್ಲಿ ಸಿಲಿಂಡರ್ ಸಿಗುತ್ತಿತ್ತು. ಕೆಲವೊಮ್ಮ ನಾಲ್ಕೈದು ದಿನವಾಗುತ್ತಿತ್ತು. ಆದರೆ ಇದೀಗ ಸಿಲಿಂಡರ್ ಬುಕ್ ಮಾಡಿ 20 ದಿನವಾಗಿದ್ದರೂ ಪೂರೈಕೆಯಾಗಿಲ್ಲ ಎಂದು ಗ್ರಾಹಕರು ಆರೋಪಿಸಿದರು.

ಎಜನ್ಸಿ ಸಿಬ್ಬಂದಿ ವಾದವೇನು? ಆದರೆ ಎಲ್‌ಪಿಜಿ ಸಿಲಿಂಡರ್ ಪೂರೈಕೆ ಮಾಡುವ ಹಾವೇರಿ ಹೆಚ್‌ಪಿ ಗ್ಯಾಸ್ ಎಜೆನ್ಸಿ ಯವರ ವಾದವೇ ಬೇರೆ. ಮೊದಲು ನಮಗೆ ಪ್ರತಿನಿತ್ಯ ಸಾವಿರ ಸಿಲಿಂಡರ್ ಪೂರೈಕೆಯ ಬೇಡಿಕೆ ಇರುತ್ತಿತ್ತು. ಈಗ ದಿನಕ್ಕೆ 9000 ಸಾವಿರ ಜನ ಸಿಲಿಂಡರ್ ಬೇಕು ಎಂದು ಬುಕ್ ಮಾಡುತ್ತಿದ್ದಾರೆ. ನಮಗೆ ಬರುವುದೇ ಸಾವಿರ ಸಿಲಿಂಡರ್. ಅದರಲ್ಲಿ ಯಾರು ಮೊದಲು ಬುಕ್ ಮಾಡಿರುತ್ತಾರೋ ಅವರಿಗೆ ಮೊದಲು ಸಿಲಿಂಡರ್ ಪೂರೈಕೆ ಮಾಡುತ್ತೇವೆ. ಉಳಿದ ಸಿಲಿಂಡರ್ ಬಂದ ಮೇಲೆ ಬುಕ್ ಮಾಡಿದ ಆದ್ಯತೆ ಮೇರೆಗೆ ಪೂರೈಕೆ ಮಾಡುತ್ತೇವೆ. ಇವತ್ತು ಗೋದಾಮಿನಲ್ಲಿ ಇರುವುದೇ 20 ಸಿಲಿಂಡರ್. ಅದರಲ್ಲಿ ಅಂಗನವಾಡಿಗಳಿಗೆ ಪೂರೈಸಬೇಕು. ಶಾಲೆಗಳಿಗೆ ಪೂರೈಸಬೇಕು. ದಿನನಿತ್ಯ ನಮಗೆ 800 ರಿಂದ 1000 ಎಲ್‌ಪಿಜಿ ಸಿಲಿಂಡರ್‌ಗಳು ಪೂರೈಕೆಯಾಗುತ್ತವೆ. ಪ್ರಸ್ತುತ 14 ಸಾವಿರ ಬೇಡಿಕೆ ಇದೆ. ಈ ರೀತಿ ಇರುವ ಕಾರಣ ಜನರಿಗೆ ಏನು ಉತ್ತರ ನೀಡಬೇಕು ಎನ್ನುವುದು ಗೊತ್ತಾಗುತ್ತಿಲ್ಲ. ಅದಕ್ಕೆ ಎಜನ್ಸಿ ಕಚೇರಿ ಬಂದ್ ಮಾಡಿರುವುದಾಗಿ ಎಜನ್ಸಿ ಸಿಬ್ಬಂದಿ ತಿಳಿಸಿದ್ದಾರೆ.

ಹೇಳಿಕೆಗೂ ವಾಸ್ತವಕ್ಕೂ ವ್ಯತ್ಯಾಸವಿದೆ: ಸರ್ಕಾರ ಯಾರು ಭಯ ಪಡಬೇಕಾಗಿಲ್ಲ, ಸಮರ್ಪಕವಾಗಿ ಎಲ್‌ಪಿಜಿ ಇದೆ ಎಂದು ಮಾಧ್ಯಮಗಳ ಮೂಲಕ ಹೇಳುತ್ತಿದೆ. ಸಚಿವರು, ಅಧಿಕಾರಿಗಳು, ಜನಪ್ರತಿನಿಧಿಗಳು ಈ ಕುರಿತಂತೆ ಪ್ರಕಟಣೆ ನೀಡುತ್ತಾರೆ. ಇಲ್ಲಿ ನೋಡಿದರೆ ಈ ರೀತಿ ಇದೆ ನಾವು ಏನ್ ಮಾಡಬೇಕು ಅಂತಾ ಪ್ರಶ್ನಿಸುತ್ತಿದ್ದಾರೆ ಗ್ರಾಹಕರು.

ಹಾರ್ಮುಜ್ ಜಲಸಂಧಿಯಲ್ಲಿ ಭಾರತದ ಹಡಗುಗಳಿಗೆ ಸಂಚಾರ ಮುಕ್ತಗೊಳಿಸಲಾಗಿದೆ. ಎರಡು ಹಡಗುಗಳು ಹೊರಟಿವೆ, ಭಾರತಕ್ಕೆ ಬಂದು ತಲುಪಿವೆ ಎನ್ನುವ ಮಾತುಗಳು ಕೇಳಿಬರುತ್ತಿವೆ.

ಆದರೆ ಇಲ್ಲಿ ನಾವು ಸಿಲಿಂಡರ್ ಬುಕ್ ಮಾಡಿ 15 ದಿನಗಳಾದರೂ ಸಿಲಿಂಡರ್ ಬಂದಿಲ್ಲ. ನಾವು ಯಾರಿಗೆ ಹೇಳಬೇಕು. ಮನೆಯಲ್ಲಿ ಕೆಲ ದಿನಗಳ ಹಿಂದೆ ಹೆರಿಗೆಯಾದ ಬಾಣಂತಿ ಇದ್ದಾಳೆ. ವಯೋವೃದ್ಧರು ಮಕ್ಕಳಿದ್ದಾರೆ. ಇವರೆನ್ನೆಲ್ಲಾ ಹೇಗೆ ನಿರ್ವಹಣೆ ಮಾಡಬೇಕು ಎಂದು ಗ್ರಾಹಕರು ತಮ್ಮ ಅಸಾಯಕತೆ ವ್ಯಕ್ತಪಡಿಸುತ್ತಿದ್ದಾರೆ.

ನಿಗದಿತ ಅವಧಿಯೊಳಗೆ ತೆರಿಗೆ ಪಾವತಿಸಿ, ರಿಯಾಯಿತಿ ಪಡೆಯಿರಿ: ಪಾಲಿಕೆ ಆಯುಕ್ತ ಮೊಹಪಾತ್ರ

ರಾಯಚೂರು ಮಾರ್ಚ್ 31

ಇಲ್ಲಿನ ರಾಯಚೂರು ಮಹಾನಗರ ಪಾಲಿಕೆಯಿಂದ 2026-27ನೇ ಸಾಲಿನ ಕಂದಾಯ ಪಾವತಿಯನ್ನು ಏಪ್ರಿಲ್ 1ರಿಂದ 30ರೊಳಗಾಗಿ ತೆರಿಗೆ ಪಾವತಿ ಮಾಡಿದಲ್ಲಿ ತೆರಿಗೆ ಪಾವತಿಯ ಒಟ್ಟು ಮೊತ್ತಕ್ಕೆ ಶೇ. 5 ರಷ್ಟು ರಿಯಾಯಿತಿಯನ್ನು ಘೋಷಿಸಲಾಗಿದ್ದು,

ನಿಗದಿತ ಅವಧಿಯೊಳಗೆ ಪಾವತಿ ಮಾಡಿ ಈ ಅವಕಾಶವನ್ನು ಸದುಪಯೋಗಪಡಿಸಿಕೊಳ್ಳುವಂತೆ ಪಾಲಿಕೆಯ ಆಯುಕ್ತರಾದ ಜುಬಿನ್ ಮೊಹಪಾತ್ರ ಅವರು ತಿಳಿಸಿದ್ದಾರೆ.

ಮೇ ಮತ್ತು ಜೂನ್ ಮಾಹೆಯಲ್ಲಿ ಯಾವುದೇ ರೀತಿಯ ರಿಯಾಯಿತಿ ನೀಡಲಾಗುವುದಿಲ್ಲ, ಮತ್ತು ಜುಲೈ 2026 ರಿಂದ ಒಟ್ಟು ಆಸ್ತಿ ತೆರಿಗೆಯ ಮೊತ್ತಕ್ಕೆ ಶೇಕಡ 2ರಷ್ಟು ಬಡ್ಡಿಯನ್ನು ವಿಧಿಸಲಾಗುವುದು. ನಿಗದಿತ ಅವಧಿಯಲ್ಲಿ ಪಾಲಿಕೆಗೆ ಪಾವತಿ ಮಾಡಬೇಕಾದ ಆಸ್ತಿಯ ಕಂದಾಯ ತೆರಿಗೆ, ನೀರಿನ ಶುಲ್ಕಗಳನ್ನು ಪಾವತಿ ಮಾಡುವುದರಿಂದ ನಗರದ ಸರ್ವತೋಮುಖ ಅಭಿವೃದ್ಧಿಯ ಕಾರ್ಯಗಳನ್ನು ಕೈಗೊಳ್ಳಲು ಅನುಕೂಲವಾಗುತ್ತದೆ. ಇದಕ್ಕಾಗಿ ಮಹಾನಗರ ಪಾಲಿಕೆಯ ವಲಯ ಕಚೇರಿ-1ರಲ್ಲಿ ಆಸ್ತಿ ತೆರಿಗೆ ಪಾವತಿ ಮಾಡಲು ಎರಡು ಕೌಂಟರ್‌ಗಳು ಮತ್ತು ವಲಯ ಕಚೇರಿ-02 ರಲ್ಲಿ ಒಂದು ಕೌಂಟರ್‌ನ್ನು ತೆರೆಯಲಾಗಿದ್ದು, ಈ ಕೌಂಟರ್‌ಗಳಲ್ಲಿ ತೆರಿಗೆ ಪಾವತಿ ಮಾಡಬಹುದಾಗಿದೆ ಎಂದು ರಾಯಚೂರು ಮಹಾನಗರ ಪಾಲಿಕೆಯ ಆಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಬೇಸಿಗೆಕಾಲದಲ್ಲಿ ಕುಡಿಯುವ ನೀರಿನ ಸಮಸ್ಯೆ ಎದುರಾಗದಂತೆ ಮುಂಜಾಗ್ರತಾ ಕ್ರಮ ಕೈಗೊಳ್ಳಿ: ಅಧಿಕಾರಿಗಳಿಗೆ ಶಾಸಕ ಬಿ.ಆರ್.ಪಾಟೀಲ್ ಸೂಚನೆ

ಆಳಂದ, ಮಾ.31-

ತಾಲೂಕಿನಲ್ಲಿ ಬೇಸಿಗೆ ಕಾಲದಲ್ಲಿ ಕುಡಿಯುವ ನೀರಿನ ಸಮಸ್ಯೆ ಎದುರಾಗದಂತೆ ಮುಂಜಾಗ್ರತಾ ಕ್ರಮಗಳನ್ನು ಕಟ್ಟುನಿಟ್ಟಾಗಿ ಕೈಗೊಳ್ಳುವಂತೆ ಶಾಸಕ ಬಿ.ಆರ್. ಪಾಟೀಲ್ ಅವರು ಟಾಸ್ಕ್‌ಫೋರ್ಸ್ ಸಭೆಯಲ್ಲಿ ಅಧಿಕಾರಿಗಳಿಗೆ ಸ್ಪಷ್ಟ ಸೂಚನೆ ನೀಡಿದರು.

ಪಟ್ಟಣದ ತಾಪಂ ಕಚೇರಿ ಸಭಾಂಗಣದಲ್ಲಿ ನಡೆದ ಗ್ರಾಪಂ ಹಾಗೂ ಸಂಬಂಧಿತ ಇಲಾಖೆಗಳ ಸಭೆಯಲ್ಲಿ ನೀರು ಪೂರೈಕೆ, ಪಂಚಾಯತ್ ಆಡಳಿತ, ತೆರಿಗೆ ವಸೂಲಾತಿ ಹಾಗೂ ಸಾರ್ವಜನಿಕ ಸಮಸ್ಯೆಗಳ ಕುರಿತು ವಿಸ್ತೃತ ಚರ್ಚೆ ನಡೆಸಿ ಅಗತ್ಯ ಮಾರ್ಗದರ್ಶನ ನೀಡಿದರು.

ಸಭೆ ಆರಂಭಕ್ಕೂ ಮುನ್ನ ತೋಟಗಾರಿಕೆ ಇಲಾಖೆಯಿಂದ ಕೆಕೆಆರ್‌ಡಿಬಿ ಅನುದಾನದಡಿ ಎಸ್‌ಸಿ, ಎಸ್‌ಟಿ ವರ್ಗದ 10 ರೈತರಿಗೆ ಉಚಿತ ತರಕಾರಿ ಬೀಜ ಕಿಟ್‌ಗಳನ್ನು ಶಾಸಕರು ವಿತರಿಸಿದರು. ಈ ಸಂದರ್ಭದಲ್ಲಿ ಸಹಾಯಕ ನಿರ್ದೇಶಕ ಸುರೇಂದ್ರನಾಥ ಹೊನ್ನಪಗೋಳ ಉಪಸ್ಥಿತರಿದ್ದರು.

ಬೆಂಗಳೂರು ಫೋಟೋಗ್ರಾಫಿಕ್ ಕ್ಲಬ್ ಆಯೋಜಿಸಿದ್ದ ಛಾಯಾಚಿತ್ರ ಸ್ಪರ್ಧೆಯಲ್ಲಿ ಭರತ್ ಕಂದಕೂರ್‌ಗೆ ಪ್ರಶಸ್ತಿ

ಕೊಪ್ಪಳ,ಮಾ.31-

ಬೆಂಗಳೂರು ಫೋಟೋಗ್ರಾಫಿಕ್ ಕ್ಲಬ್ ಆಯೋಜಿಸಿದ್ದ 'ಕರ್ನಾಟಕದ ಜಾತ್ರೆ ಮತ್ತು ಉತ್ಸವಗಳು ಕುರಿತ ಛಾಯಾಚಿತ್ರ ಸ್ಪರ್ಧೆಯಲ್ಲಿ ಕೊಪ್ಪಳದ ಛಾಯಾಗ್ರಹಕ ಭರತ್ ಕಂದಕೂರ ಅವರಿಗೆ ಬಹುಮಾನ ಲಭಿಸಿದೆ. ದೊಡ್ಡಬಳ್ಳಾಪುರದ ಸುಧೀರ್ ಭಜನೆ ಹಟ್ಟಿ ಅವರ ಕೊಪ್ಪಳದ ಗವಿಸಿದ್ದೇಶ್ವರ ಜಾತ್ರೆ ಚಿತ್ರ (ಪ್ರಥಮ ಸ್ಥಾನ), ದೊಡ್ಡಬಳ್ಳಾಪುರದ ಬಿ.ಎನ್.ಉಮಾಶಂಕರ್ ಅವರ ಗೋಕಾಕದ ಭಂಡಾರ ಜಾತ್ರೆ ಚಿತ್ರ (ದ್ವಿತೀಯ ಸ್ಥಾನ), ಪ್ರಜಾವಾಣಿಯ ಕೊಪ್ಪಳ ಛಾಯಾಗ್ರಾಹಕ ಭರತ್ ಕಂದಕೂರ ಅವರ ಅಂಜನಾದ್ರಿ ಬೆಟ್ಟದ ಹನುಮ ಮಾಲೆ ಚಿತ್ರ (ತೃತೀಯ ಸ್ಥಾನ) ಪಡೆದಿವೆ.



ಮುಂದಿನ ವರ್ಷದ ಛಾಯಾಚಿತ್ರ ಸ್ಪರ್ಧೆಗೆ 'ಕನಾಟಕದ ಹಬ್ಬ ಮತ್ತು ಆಚರಣೆಗಳು' ಎನ್ನುವ ವಿಷಯ ಆಯ್ಕೆ ಮಾಡಲಾಗಿದ್ದು, ಛಾಯಾಗ್ರಾಹಕರು ಭಾಗಿಯಾಗಬಹುದು ಎಂದು ಕ್ಲಬ್ ಅಧ್ಯಕ್ಷ ಟಿ.ಕೆಂಪಣ್ಣ ತಿಳಿಸಿದ್ದಾರೆ. ಪ್ರಶಸ್ತಿಯು ನಗದು ಹಾಗೂ ಪುರಸ್ಕಾರ ಒಳಗೊಂಡಿದ್ದು ಏಪ್ರಿಲ್ ಎರಡನೇ ವಾರದಲ್ಲಿ ಬೆಂಗಳೂರಿನಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ.

ನಶೆ ಇಂದಿನ ಸಮಾಜಕ್ಕೆ ಗಂಭೀರ ಸವಾಲು



ಬೀದರ್,ಮಾ.31-

ಪ್ರಜಾಪಿತಾ ಬ್ರಹ್ಮಕುಮಾರಿಸ್ ಈಶ್ವರೀಯ ವಿಶ್ವವಿದ್ಯಾಲಯದ ಪಾವನಧಾಮ ಬೀದರ್ ವತಿಯಿಂದ 'ನಶಾ -ಮುಕ್ತ ಭಾರತ ಅಭಿಯಾನ' ಯಶಸ್ವಿಯಾಗಿ ಪೂರ್ಣಗೊಂಡ ಹಿನ್ನೆಲೆಯಲ್ಲಿ ನಗರದ ಪಾಪನಾಶ ಗೇಟ್‌ನ ಸಾಯಿ ರಾಮ ಸಮರ್ಥ ಫಂಕ್ಷನ್ ಹಾಲ್‌ನಲ್ಲಿ ಅಭಿನಂದನಾ ಸಮಾರಂಭ ನಡೆಯಿತು.

ಕಾರ್ಯಕ್ರಮಕ್ಕೆ ಬ್ರಹ್ಮಕುಮಾರಿಸ್ ಪಾವನಧಾಮ ಸಂಸ್ಥೆಯ ಜಿಲ್ಲಾ ಮುಖ್ಯಸ್ಥೆ ಬಿ.ಕೆ. ಪ್ರತಿಮಾ ಬಹೆನಜಿ ಸಾನ್ನಿಧ್ಯ ವಹಿಸಿದ್ದರು. ಕಾರ್ಯಕ್ರಮವು ನಶಾಮುಕ್ತಿ ಪ್ರತಿಜ್ಞಾ ವಿಧಿ ಸ್ವೀಕಾರದೊಂದಿಗೆ ಆರಂಭವಾಯಿತು. ಪೌರಾಡಳಿತ ಮತ್ತು ಹಜ್ ಸಚಿವ ರಹೀಮ್ ಖಾನ್ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿ, ನಶೆ ಇಂದಿನ ಸಮಾಜಕ್ಕೆ ಗಂಭೀರ ಸವಾಲಾಗಿದೆ. ಅದು ವ್ಯಕ್ತಿಯ ಬದುಕಿನಷ್ಟೇ ಅಲ್ಲದೆ ಕುಟುಂಬ ಹಾಗೂ ಸಮಾಜದ ಮೇಲೂ ದುಷ್ಪರಿಣಾಮ ಬೀರುತ್ತದೆ ಎಂದು ಹೇಳಿದರು.

ನಶೆಗೆ ಒಳಗಾದ ವ್ಯಕ್ತಿ ತನ್ನ ಜವಾಬ್ದಾರಿಗಳನ್ನು ಮರೆತು ಕುಟುಂಬದಲ್ಲಿ ಆರ್ಥಿಕ ಸಂಕಷ್ಟ ಹಾಗೂ ಮಾನಸಿಕ ಒತ್ತಡ ಉಂಟುಮಾಡುತ್ತಾನೆ. ವಿಶೇಷವಾಗಿ ಗ್ರಾಮೀಣ ಪ್ರದೇಶಗಳಲ್ಲಿ ಇದರ ಪರಿಣಾಮ ಇನ್ನಷ್ಟು ಗಂಭೀರವಾಗಿದೆ. ಹೀಗಾಗಿ ಆರೋಗ್ಯಕರ ಜೀವನಶೈಲಿಯನ್ನು ಅಳವಡಿಸಿಕೊಂಡು ನಶೆಯಿಂದ ದೂರವಿರುವುದು ಪ್ರತಿಯೊಬ್ಬರ ಕರ್ತವ್ಯ ಎಂದರು.

ಬ್ರಹ್ಮಾಕುಮಾರಿಸ್ ಪ್ರಧಾನ ಕೇಂದ್ರ ಮೌಂಟ್ ಅಬುವಿನ ವೈದ್ಯಕೀಯ ವಿಭಾಗದ ಅಧ್ಯಕ್ಷರು ಹಾಗೂ ಅಭಿಯಾನದ ನಿರ್ದೇಶಕ ಡಾ. ಬನಾರಸಿಲಾಲ್ ಶಾ ಮಾತನಾಡಿ, ನಶಾ ಮುಕ್ತ ಭಾರತ ಅಭಿಯಾನ ದೇಶದಾದ್ಯಂತ ವ್ಯಾಪಕವಾಗಿ ಹರಡಿದ್ದು ಈಗಾಗಲೇ ಸುಮಾರು 4 ಕೋಟಿಗೂ ಹೆಚ್ಚು ಜನರಿಗೆ ತಲುಪಿದೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಪಶುವೈದ್ಯಕೀಯ ಮತ್ತು ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯದ ಡಾ. ಶಿವಪ್ರಕಾಶ, ಬೀದರ ವಿಶ್ವವಿದ್ಯಾಲಯದ ವಿಶೇಷಾಧಿಕಾರಿ ರವೀಂದ್ರ ಗಬಾಡೆ, ಜ್ಞಾನಸುಧಾ ಶಿಕ್ಷಣ ಸಂಸ್ಥೆಯ ಅಧ್ಯಕ್ಷೆ ಪೂರ್ಣಿಮಾ ಜಾರ್ಜ್, ಎಚ್‌ಕೆಇ ಸಂಸ್ಥೆಯ ಆಡಳಿತ ಮಂಡಳಿ ಸದಸ್ಯ ಡಾ. ರಾಜನೀಶ ಎಸ್. ವಾಲಿ, ಬಸವರಾಜ ಜಿ. ಪಾಟೀಲ್, ರಾಜಶೇಖರ್ ಸೇಡಂಕರ್ ವೇದಿಕೆಯಲ್ಲಿದ್ದರು.

ಈ ಸಂದರ್ಭದಲ್ಲಿ ಜಿಲ್ಲೆಯ ವಿವಿಧ ಭಾಗಗಳಿಂದ ವ್ಯಸನಮುಕ್ತರಾಗಿರುವ 150ಕ್ಕೂ ಹೆಚ್ಚು ಮಂದಿಯನ್ನು ಸನ್ಮಾನಿಸಿ ಗೌರವಿಸಲಾಯಿತು. ತಮ್ಮ ಜೀವನದಲ್ಲಿ ಸಂಭವಿಸಿದ ಸಕಾರಾತ್ಮಕ ಬದಲಾವಣೆಗಳನ್ನು ಅವರು ಹಂಚಿಕೊಂಡರು. ಬಿ.ಕೆ. ಗುರುದೇವಿ ಬಹೆನಜಿ ಅತಿಥಿಗಳನ್ನು ಸ್ವಾಗತಿಸಿದರು. ಬಿ.ಕೆ. ರಾಧಾ ಬಹೆನಜಿ ಕಾರ್ಯಕ್ರಮ ನಿರೂಪಿಸಿದರು. ಬಿ.ಕೆ. ಸುಮನ್ ಬಹೆನಜಿ, ಬಿ.ಕೆ. ಉಷಾ ಬಹೆನಜಿ, ಬಿ.ಕೆ. ಮಂದಾ ಬಹೆನಜಿ ಸೇರಿದಂತೆ ವಿವಿಧ ಸೇವಾ ಕೇಂದ್ರಗಳಿಂದ ಬಂದ ಬ್ರಹ್ಮಾಕುಮಾರಿ ಸಹೋದರರು ಮತ್ತು ಸಹೋದರಿಯರು ಉಪಸ್ಥಿತರಿದ್ದರು.

ಕಬ್ಬು ಬೆಳೆಗಾರರ ಬಿಲ್ ಪಾವತಿಗೆ ಆಗ್ರಹ

ಕಮಲನಗರ:

ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ತಾಲ್ಲೂಕು ಘಟಕ ಪದಾಧಿಕಾರಿಗಳ ನೇತೃತ್ವದಲ್ಲಿ ಕಬ್ಬು ಬಿಲ್ಲು ಪಾವತಿಸಬೇಕು ಎಂದು ಒತ್ತಾಯಿಸಿ ತಹಶೀಲ್ದಾರ್ ಅಮಿತಕುಮಾರ ಕುಲಕರ್ಣಿ ಅವರ ಮೂಲಕ ಜಿಲ್ಲಾಧಿಕಾರಿಗಳಿಗೆ ಮನವಿ ಪತ್ರ ಸಲ್ಲಿಸಲಾಯಿತು.

ರೈತ ಸಂಘದ ತಾಲ್ಲೂಕು ಘಟಕ ಅಧ್ಯಕ್ಷ ಪ್ರವೀಣ ಕುಲಕರ್ಣಿ ಮಾತನಾಡಿ, ರೈತ ಬಾಂಧವರೂ ತಮ್ಮ ಕಬ್ಬು ಸಾಗಣೆ ಮಾಡಿ ಎರಡು ತಿಂಗಳಾದರೂ ಕಬ್ಬು ಸಾಗಣೆ ಬಿಲ್ಲು

ಪಾವತಿಯಾಗಿಲ್ಲದಿರುವುದು ದುಃಖಕರ ಸಂಗತಿಯಾಗಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಮುಂದಿನ 10 ದಿನಗಳ ಒಳಗಾಗಿ ರೈತರ ಕಬ್ಬಿನ ಬಿಲ್ ಪಾವತಿ ಮಾಡದೇ ಇದ್ದಲ್ಲಿ ರಸ್ತೆಗಿಳಿದು ಪ್ರತಿಭಟನೆ ನಡೆಸಬೇಕಾಗುತ್ತದೆ ಎಂದು ಸಂಘಟನೆ ಪ್ರಮುಖರು ಎಚ್ಚರಿಸಿದರು.

ನಿಮ್ಮೂರು ಸುದ್ದಿ

ಸಂಪಾದಕೀಯ

ದಾವಣಗೆರೆ ಉಪ ಚುನಾವಣೆ ಯಾರೇ ಸೋಲಲಿ ಅಥವಾ ಗೆಲ್ಲಲಿ, ಕಾಂಗ್ರೆಸ್ಸಿನ ರಾಜಕೀಯ ಸೋತಾಗಿದೆ!

ಸಮಾಜದಲ್ಲಿ ಹೆಚ್ಚುತ್ತಿರುವ ಧ್ರುವೀಕರಣವನ್ನು ಕಡಿಮೆ ಮಾಡಿ, ತನ್ನೆಡೆಗೆ ಒಂದು ಮೆಜಾರಿಟಿಯನ್ನು ರೂಪಿಸಿಕೊಳ್ಳುವ ಅತ್ಯಪೂರ್ವ ಅವಕಾಶ ಕಾಂಗ್ರೆಸ್‌ಗೆ ಇದ್ದರೂ, ಆ ವಿಚಾರದಲ್ಲಿ ದಿಕ್ಕೇಡಿಯಂತಿದೆ. ಕನಿಷ್ಠ ಬದ್ಧತೆಯನ್ನೂ ಈ ಪಕ್ಷ ತೋರುತ್ತಿಲ್ಲ

ವರ್ತಮಾನದ ರಾಜಕಾರಣದ ಒಂದು ಘೋರ ವಾಸ್ತವವು ದಾವಣಗೆರೆ ಉಪ ಚುನಾವಣೆಯ ಸಂದರ್ಭದಲ್ಲಿ ಮತ್ತೊಮ್ಮೆ ಅನಾವರಣಗೊಂಡಿದೆ. ದೇಶದ ಸಮಾಜದಲ್ಲಿ ಮತ್ತು ರಾಜಕಾರಣದಲ್ಲಿ ಘೋಷಿತ ಕೋಮುವಾದೀ ಸಿದ್ಧಾಂತದ ಬಿಜೆಪಿಯು ಮುಸ್ಲಿಂ ಸಮುದಾಯವನ್ನು ಸತತವಾಗಿ ದಾಳಿಗೆ ಗುರಿಯಾಗಿಸಿ ಅಂಚಿಗೆ ತಳ್ಳುತ್ತಿದೆ. ಘೋಷಿತ ಸೆಕ್ಯುಲರ್ ಸಿದ್ಧಾಂತದ ಕಾಂಗ್ರೆಸ್ ಪಕ್ಷವೂ ಸಹಾ ಮುಸ್ಲಿಂ ಸಮುದಾಯಕ್ಕೆ ನ್ಯಾಯ ಒದಗಿಸುತ್ತಿಲ್ಲ. ಎರಡೂ ಪಕ್ಷಗಳ ಈ ನಡೆಗೆ ಕಾರಣ ಒಂದೇ ಅಲ್ಲ. ಬಿಜೆಪಿಯು ಒಂದು ಅಜೆಂಡಾದ ಭಾಗವಾಗಿ ಸಮುದಾಯವನ್ನು ಎರಡನೇ ದರ್ಜೆಯ ಪ್ರಜೆಗಳನ್ನಾಗಿಸುವ ಕೆಲಸದಲ್ಲಿ ನಿರತರಾಗಿದೆ. ಆದರೆ, ಈ ಸಮುದಾಯದ ಅಖಂಡ ಬೆಂಬಲವನ್ನು ಪಡೆದುಕೊಂಡಿರುವ ಕಾಂಗ್ರೆಸ್ ಬಿಜೆಪಿಯ ಕೋಮುವಾದಕ್ಕೆ ಪರಿಣಾಮಕಾರಿಯಾದ ಪ್ರತಿಮದ್ದನ್ನು ಹೊಂದಿಲ್ಲ. ಅದರ ಬಳಿ ಕೋಮು ಧ್ರುವೀಕರಣವನ್ನು ಎದುರಿಸುವ ತಂತ್ರವೂ ಸ್ಪಷ್ಟವಿಲ್ಲ; ತನ್ನ ಘೋಷಿತ ಸಿದ್ಧಾಂತವನ್ನು ಎತ್ತಿ ಹಿಡಿಯುವ ಮತ್ತು ಸಮೂಹ ನೆಲೆಯನ್ನು ರಕ್ಷಿಸುವ ಬದ್ಧತೆಯೂ ಇಲ್ಲ. ಜೊತೆಗೆ ಸಾಂಪ್ರದಾಯಿಕ ರಾಜಕಾರಣವೇ ರೂಢಿಯಾಗಿದ್ದು ಬಲಾಢ್ಯರನ್ನು ಎದುರು ಹಾಕಿಕೊಳ್ಳುವ ಛಾತಿಯೂ ಇಲ್ಲ. ಇವೆಲ್ಲದರ ಕಾರಣದಿಂದ ಅನ್ಯಾಯವನ್ನು ಅನುಭವಿಸುವುದು ಮಾತ್ರ ಮುಸ್ಲಿಮರಾಗಿದ್ದಾರೆ. ದಾವಣಗೆರೆ ದಕ್ಷಿಣದಲ್ಲಿ ನಡೆಯುತ್ತಿರುವುದು ಅದೇ ಆಗಿದೆ.

ದಾವಣಗೆರೆ ದಕ್ಷಿಣ ಕ್ಷೇತ್ರವು ಶೇ.35ರಷ್ಟು ಮುಸ್ಲಿಂ ಮತದಾರರನ್ನು ಹೊಂದಿರುವ ಕ್ಷೇತ್ರವಾಗಿರುವುದರಿಂದ ಈ ವಿಷಯವು ಎದ್ದು ಕಾಣುತ್ತಿದೆ. ದೇಶದ ರಾಜಕಾರಣದಲ್ಲಿ ಶೇ.25ಕ್ಕಿಂತ ಹೆಚ್ಚು ಜನಸಂಖ್ಯೆ ಹೊಂದಿರದ, ಆದರೆ ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಬಲ ಹೊಂದಿರುವ ಜಾತಿಗಳೇ ಯಜಮಾನಿಕೆ ತೋರುತ್ತಾ ಬಂದಿವೆ. ಶೇ.75ರಷ್ಟಿರುವ ಸಮುದಾಯಗಳಿಗೆ ಅಂತಹ ಯಜಮಾನಿಕೆ ಅಸಾಧ್ಯವಾಗಿತ್ತು. ಸಾಂವಿಧಾನಿಕ ರಕ್ಷಣೆಯ ಕಾರಣಕ್ಕೆ ಪರಿಶಿಷ್ಟ ಜಾತಿ, ಪಂಗಡಗಳು ಪ್ರಾತಿನಿಧ್ಯ ಪಡೆದುಕೊಂಡರೂ, ಬಲ ಪಡೆಯುವುದು ಸುಲಭವಿಲ್ಲ. ಆದರೆ, 70ರ ದಶಕದಲ್ಲಿ ಕರ್ನಾಟಕದಲ್ಲಿ ದೇವರಾಜ ಅರಸರ ನೇತೃತ್ವದಲ್ಲಿ ಈ ಬಹುಸಂಖ್ಯಾತ ಜಾತಿಗಳು ಆಳ್ವಿಕೆಯಲ್ಲಿ ಗಣನೀಯ ಪಾಲು ಪಡೆಯುತ್ತಿದ್ದರು ಎಂದು ಗತ ಇತಿಹಾಸದ ಮೆಲುಕು ಹಾಕುವ ಕೆಲಸ ಮಾತ್ರ ಆಗಾಗ ನಡೆಯುತ್ತಿರುತ್ತದೆ.

1990ರ ನಂತರ ಬಿಜೆಪಿಯು ಪ್ರವರ್ಧಮಾನಕ್ಕೆ ಬಂದಂತೆಲ್ಲಾ, ಮುಸ್ಲಿಮರ ರಾಜಕೀಯ ಪ್ರಾತಿನಿಧ್ಯವು ಗಂಭೀರ ಅಪಾಯವನ್ನೆದುರಿಸುತ್ತಾ ಬಂದಿತು. 2023ರ ಚುನಾವಣೆಯಲ್ಲಿ ಕರ್ನಾಟಕದಲ್ಲಿ 15 ಕ್ಷೇತ್ರಗಳಲ್ಲಿ ಕಾಂಗ್ರೆಸ್ಸು ಮುಸ್ಲಿಮರಿಗೆ ಟಿಕೆಟ್ ಕೊಟ್ಟಿದ್ದು, 9ರಲ್ಲಿ ಗೆದ್ದಿದ್ದರು. ನಂತರ ಶಿಗ್ಗಾಂವ್‌ನಲ್ಲಿ ನಡೆದ ಉಪಚುನಾವಣೆಯಲ್ಲಿ ಇನ್ನೊಬ್ಬ ಮುಸ್ಲಿಂ ಅಭ್ಯರ್ಥಿ ಗೆದ್ದರು. ಸುಮಾರು 19 ಕ್ಷೇತ್ರಗಳಲ್ಲಿ ಮುಸ್ಲಿಮರು ಶೇ.30ರಷ್ಟಿದ್ದರೂ, ಇಷ್ಟೇ ಸಾಧ್ಯ ಎಂಬ ಚರ್ಚೆ ಚುನಾವಣೆಗೆ ಮುಂಚೆಯೇ ಒಂದೆಡೆ ನಡೆದಿತ್ತು. 2023ರ ಚುನಾವಣೆಯ ಸಂದರ್ಭದಲ್ಲಿ ದೀರ್ಘಕಾಲ ಕರ್ನಾಟಕದಲ್ಲಿದ್ದ ಪ್ರೊ.ಯೋಗೇಂದ್ರ ಯಾದವ್ ಅವರು ಕರ್ನಾಟಕವೇ ಪರವಾಗಿಲ್ಲ; ಗಣನೀಯ ಪ್ರಾತಿನಿಧ್ಯ ಸಿಕ್ಕಿದೆ ಎಂದು ಎಲ್ಲರನ್ನೂ ಅಚ್ಚರಿಗೆ ಕೆಡವಿದ್ದರು.

ಅವರು ಹೇಳಿದ್ದೇನೆಂದರೆ, ಒಂದು ವೇಳೆ ಶೇ.30 ಇರಲಿ, ಶೇ.40ರಷ್ಟು ಮುಸ್ಲಿಮರಿದ್ದರೂ ಜಾತ್ಯತೀತ ಪಕ್ಷಗಳು ಉತ್ತರ ಭಾರತದಲ್ಲಿ ಖಂಡಿತಾ ಟಿಕೆಟ್ ಕೊಡುವುದಿಲ್ಲ. ಏಕೆಂದರೆ, ಉಳಿದ ಶೇ.60ರಿಂದ 70ರಷ್ಟು ಹಿಂದೂಗಳು ಧ್ರುವೀಕರಣವಾಗಿಬಿಡುತ್ತಾರೆ ಎಂಬುದೇ ಅದಕ್ಕೆ ಕಾರಣ. ಮುಸ್ಲಿಂ ಬಾಹುಳ್ಯ ಹೆಚ್ಚಿದ್ದಲ್ಲಿ ಹಿಂದೂ ಧ್ರುವೀಕರಣ ಸುಲಭ. ಅದೇ ಸಂದರ್ಭದಲ್ಲಿ ಒಂದು ವೇಳೆ ಶೇ.50ರಷ್ಟು ಮುಸ್ಲಿಮರಿದ್ದರೂ ಕೊಡುವುದಿಲ್ಲ ಅಥವಾ ಗೆಲ್ಲುವುದಿಲ್ಲ. ಏಕೆಂದರೆ, ಆಗ ಒಂದಕ್ಕಿಂತ ಹೆಚ್ಚು ಮುಸ್ಲಿಂ ಅಭ್ಯರ್ಥಿಗಳು ಸ್ಪರ್ಧೆ ಮಾಡಿ, ಮುಸ್ಲಿಂ ಅಭ್ಯರ್ಥಿಗಳು ಸೋಲುತ್ತಾರೆ. ಶೇ.65ಕ್ಕಿಂತ ಹೆಚ್ಚು ಮುಸ್ಲಿಂ ಮತದಾರರಿದ್ದರೆ ಮಾತ್ರ ಅವರಿಗೆ ಟಿಕೆಟ್ ಕೊಡುತ್ತಾರೆ ಎಂದಿದ್ದರು. ಇದು ಈ ದೇಶ ಸಾಗುತ್ತಿರುವ ದಿಕ್ಕಿಗೆ ಸೂಚಕ ಎಂದು ನಾವು ಪರಿಗಣಿಸಬಹುದು.

ಯಾವುದೇ ಸಮೀಕ್ಷೆ, ವಿಶ್ಲೇಷಣೆಗಳನ್ನು ನೋಡಿದರೂ ಅಥವಾ ರಾಜಕೀಯ ಅಂದಾಜು ಇರುವ ಯಾರೇ ಆದರೂ ಹೇಳಬಹುದಾದ ಎರಡು ಸಂಗತಿಗಳಿವೆ. ಕಾಂಗ್ರೆಸ್ ಪಕ್ಷಕ್ಕೆ ಕರ್ನಾಟಕದಲ್ಲಿ ಬರುವ ಮತಗಳಲ್ಲಿ ಶೇ.90ರಷ್ಟು ಮತಗಳು ಅಹಿಂದ ಸಮುದಾಯಗಳಿಂದಲೇ ಬರುತ್ತವೆ ಮತ್ತು ಮುಸ್ಲಿಮರಲ್ಲಿ ಶೇ.90ಕ್ಕಿಂತ ಹೆಚ್ಚು ಮತದಾರರು ಕಾಂಗ್ರೆಸ್ಸಿಗೇ ಮತ ಹಾಕಿದ್ದಾರೆ. ಹೀಗಿರುವಾಗ, ಕಾಂಗ್ರೆಸ್ ಪಕ್ಷವು ಮುಸ್ಲಿಮರ ಹಿತ ಕಾಯುವ ಕೆಲಸವನ್ನು ಮಾಡುವುದು ಸಹಜವಾಗಿರಬೇಕಿತ್ತು. ಆದರೆ, ಸಮಾಜದಲ್ಲಿ ಧ್ರುವೀಕರಣ ಹೆಚ್ಚಾಗಿರುವುದು ಮತ್ತು ಆ ಕಾರಣಕ್ಕೆ ಮುಸ್ಲಿಂ ಅಭ್ಯರ್ಥಿಗೆ ಟಿಕೆಟ್ ಕೊಟ್ಟರೆ ಸೋಲುವುದು ನಿಜ. ಹೀಗಾಗಿ ಒಂದು ರಾಜಕೀಯ ಪಕ್ಷವಾಗಿ, ಅಧಿಕಾರಕ್ಕೇರಬೇಕಾದರೆ ಚುನಾವಣಾ ಗೆಲುವೇ ಮಾನದಂಡವಾಗಬೇಕಲ್ಲವೇ? ಈ ಮಾತು ಮುಸ್ಲಿಮರಿಗೆ ಅನ್ವಯಿಸಿದ ಹಾಗೆಯೇ ಇತರ ಶೋಷಿತ ಸಮುದಾಯಗಳಿಗೂ, ಮಹಿಳೆಯರಿಗೂ ಸಹಾ ಅನ್ವಯಿಸುತ್ತದೆ. ಇದೇ ಕಾರಣಕ್ಕೆ ಮತ್ತೆ ಮತ್ತೆ ಬಲಾಢ್ಯ ಜಾತಿಗಳೇ ಹೆಚ್ಚೆಚ್ಚು ಅಧಿಕಾರವನ್ನು ಅನುಭವಿಸುತ್ತಾ ಇರುತ್ತಾರೆ.

ಹಾಗಾದರೆ, 1978ರಲ್ಲಿ ಕರ್ನಾಟಕದಲ್ಲಿ 16 ಮುಸ್ಲಿಂ ಶಾಸಕರಿದ್ದರು ಎಂಬುದು ಮತ್ತು ಅತಿ ಹೆಚ್ಚು ಹಿಂದುಳಿದ ಜಾತಿಗಳಿಗೆ ಸೇರಿದ ಶಾಸಕರು ಇದ್ದರು ಎಂದು ಜಪಿಸುವುದೇಕೆ? ಆ ಕಾಲ ಬೇರೆಯಾಗಿತ್ತು; ಅದು ಇಂದಿರಾಗಾಂಧಿಯ ಅಲೆಯಲ್ಲಿ ಆದ ಪವಾಡವಷ್ಟೇ ಎಂಬ ಸಮಜಾಯಿಷಿಯೂ ಜೊತೆಯಲ್ಲೇ ಸಿದ್ಧವಾಗಿರುತ್ತದೆ. ಮುಸ್ಲಿಮರಿಗೆ ಆದದ್ದೇ, ಇತರ ಹಿಂದುಳಿದ ಜಾತಿಗಳವರಿಗೂ ಆಗುತ್ತದೆ ಎಂಬುದನ್ನು ಅರಿಯದೇ, ಅವರೂ ಬಿಜೆಪಿ ಮತ್ತು ಆರೆಸ್ಸೆಸ್ಸಿನ ಧ್ರುವೀಕರಣಕ್ಕೆ ಬಲಿಪಶುಗಳಾಗುತ್ತಾರೆ. ಹಾಗೆ ನೋಡಿದರೆ ಮುಸ್ಲಿಮರಿಗಿಂತ ಹೆಚ್ಚು ಪ್ರಾತಿನಿಧ್ಯದ ಕೊರತೆಯನ್ನು ಅನುಭವಿಸುವುದು ಸಣ್ಣ ಪುಟ್ಟ ಹಿಂದುಳಿದ ಜಾತಿಗಳು. ಮುಸ್ಲಿಮರು ಸಂಖ್ಯೆಯಲ್ಲಿ ಗಣನೀಯ ಪ್ರಮಾಣದಲ್ಲಿ ಇರುವುದು ಮಾತ್ರವಲ್ಲದೇ, ಕೆಲವು ಕ್ಷೇತ್ರಗಳಲ್ಲಿ ಚುನಾವಣೆಯಲ್ಲಿ ಗೆಲ್ಲಲು ಬೇಕಾದಷ್ಟು ಸಂಖ್ಯೆಯಲ್ಲಿದ್ದಾರೆ. ಆದರೆ, ರಾಜ್ಯದ ಎಲ್ಲಾ ಕ್ಷೇತ್ರಗಳಲ್ಲೂ ಅತೀ ಕಡಿಮೆ ಸಂಖ್ಯೆಯಲ್ಲಿ ಹಂಚಿ ಹೋಗಿರುವ ಹಿಂದುಳಿದ ಜಾತಿಗಳ ಕತೆ ಏನು?

ಅದರ ಜೊತೆ ಜೊತೆಗೇ ಬಲಾಢ್ಯ ಜಾತಿಗಳಿಂದ ಬಂದ ಈ ಸೆಕ್ಯುಲರ್ ಪಕ್ಷಗಳ ಅಭ್ಯರ್ಥಿಗಳೂ ಗೆಲ್ಲುವುದು ಸೆಕ್ಯುಲರ್ ಪಕ್ಷಗಳ ಅಹಿಂದ/ಬಹುಜನ ಸಾಮಾಜಿಕ ನೆಲೆಯಿಂದ ತಾನೇ? ಹಾಗಿದ್ದ ಮೇಲೆ ಈ ಬಲಾಢ್ಯರ ಕರ್ತವ್ಯವೇನು? ಈ ಪ್ರಶ್ನೆಯನ್ನು ಎಂದೆಂದೂ ಕಾಂಗ್ರೆಸ್ ಪಕ್ಷ ಹಾಕಿಕೊಳ್ಳದೇ ಇರುವುದರಿಂದಲೇ ಮತ್ತು ಅದನ್ನು ಧೈರ್ಯದಿಂದ ಕೇಳದೇ ಇರುವುದರಿಂದಲೇ ಯಥಾಸ್ಥಿತಿಯೆಂಬ ದುಸ್ಥಿತಿ ಇರುವುದು.

ಹಿಂದುಳಿದ ಜಾತಿಗಳು, ಸಂಖ್ಯೆಯಲ್ಲಿ ಸಣ್ಣಪುಟ್ಟ ಜಾತಿಗಳು ಅಥವಾ ಮುಸ್ಲಿಂ ಸಮುದಾಯವನ್ನಷ್ಟೇ ಪ್ರತಿನಿಧಿಸುವ ಸಂಘಟನೆಗಳು, ಗುಂಪುಗಳು, ಚಿಂತಕರು, ಆಕ್ಟಿವಿಸ್ಟುಗಳು ತಮ್ಮ ತಮ್ಮ ಸಮುದಾಯದ ಹಕ್ಕನ್ನು ಪ್ರತಿಪಾದಿಸುವುದು ಸುಲಭ. ಆದರೆ, ರಾಜಕೀಯ ಪಕ್ಷವೊಂದು ವಿವಿಧ ಸಮುದಾಯಗಳನ್ನು ಬೆಸೆಯಬಲ್ಲ ಒಂದು ಸಮೀಕರಣವನ್ನು, ತಂತ್ರವನ್ನು, ಘೋಷಣೆಯನ್ನು, ಕಥನವನ್ನು ಮುಂದಿಟ್ಟು ಮೆಜಾರಿಟಿಯನ್ನು ಸೃಷ್ಟಿಸಿಕೊಳ್ಳಬೇಕಾಗುತ್ತದೆ. ಅದಿಲ್ಲದೇ, ಸದರಿ ಪಕ್ಷವು ಅಧಿಕಾರವನ್ನು ಪಡೆದುಕೊಳ್ಳಲಾಗುವುದಿಲ್ಲ. ಅದನ್ನೇ ನಾವು ರಾಜಕಾರಣ ಎಂದು ಕರೆಯುವುದು. ಅಂತಹ ರಾಜಕಾರಣವನ್ನು ಮಾಡುವುದರಲ್ಲಿ ಕಾಂಗ್ರೆಸ್ಸು ವಿಫಲವಾಗಿದೆ.

ಅದರಲ್ಲೂ ಮುಸ್ಲಿಂ ಸಮುದಾಯದ ವಿಚಾರದಲ್ಲಿ ಘೋರವಾಗಿ ವಿಫಲವಾಗಿದೆ. ಚುನಾವಣೆಯಲ್ಲಿ ಟಿಕೆಟ್ ಕೊಡುವುದು ಹೋಗಲಿ, ಹಿಜಾಬ್ ವಿಚಾರದಲ್ಲಿ ಅಮಾನವೀಯವಾದ ಕೃತ್ಯಕ್ಕೆ ಕೈ ಹಾಕಿದ ಬಿಜೆಪಿಯನ್ನು ಸೋಲಿಸಿ ದೊಡ್ಡ ಬಹುಮತದಿಂದ ಆರಿಸಿ ಬಂದ ಮೇಲೂ ಆ ನಿಟ್ಟಿನಲ್ಲಿ ಒಂದು ಸರಳ ಸರ್ಕಾರೀ ಆದೇಶ ಹೊರಡಿಸಿಲ್ಲ; 2 ಬಿ ಮೀಸಲಾತಿಯ ವಿಚಾರದಲ್ಲಿ ಕ್ರಮ ತೆಗೆದುಕೊಂಡಿಲ್ಲ; ಯತ್ನಾಳರಂಥವರು, ಸಿ.ಟಿ.ರವಿಯಂಥವರು, ಸುನಿಲ್ ಕುಮಾರನಂಥವರು ಹೋಗಲಿ, ಕನಿಷ್ಠ ಪುನೀತ್ ಕೆರೆಹಳ್ಳಿಯನ್ನು ಹೆಡೆಮುರಿ ಕಟ್ಟಲಾಗಿಲ್ಲ. ಎಲ್ಲಾ ಏಕೆಂದರೆ, ತನ್ನ ಘೋಷಿತ ಸಿದ್ಧಾಂತದ ಆಧಾರದ ಮೇಲೆ ರಾಜಕೀಯ ಮಾಡಲು ಅದರಿಂದ ಆಗುತ್ತಿಲ್ಲ. ಸಮಾಜದಲ್ಲಿ ಹೆಚ್ಚುತ್ತಿರುವ ಧ್ರುವೀಕರಣವನ್ನು ಕಡಿಮೆ ಮಾಡಿ, ತನ್ನೆಡೆಗೆ ಒಂದು ಮೆಜಾರಿಟಿಯನ್ನು ರೂಪಿಸಿಕೊಳ್ಳುವ ಅತ್ಯಪೂರ್ವ ಅವಕಾಶ ಅದಕ್ಕಿದ್ದರೂ, ಆ ವಿಚಾರದಲ್ಲಿ ದಿಕ್ಕೇಡಿಯಂತಿದೆ. ಕನಿಷ್ಠ ಬದ್ಧತೆಯನ್ನೂ ಈ ಪಕ್ಷ ತೋರುತ್ತಿಲ್ಲ. ತನ್ನೆಲ್ಲಾ ಕಾರ್ಯಕರ್ತರಿಗೆ ನಾಯಕತ್ವ ಕೊಟ್ಟು ಸಾಮಾಜಿಕ ನ್ಯಾಯ ಮತ್ತು ಸೆಕ್ಯುಲರಿಸಂಅನ್ನು ಸಮಾಜದಲ್ಲಿ ಪಸರಿಸುವುದೇ ಆ ಪಕ್ಷ ಮಾಡಬೇಕಿದ್ದ ಕೆಲಸ. ಆದರೆ, ಮಲ್ಲಿಕಾರ್ಜುನ್ ರೀತಿಯ ಫ್ಯೂಡಲ್ ನಾಯಕರನ್ನಿಟ್ಟುಕೊಂಡು, ಪಕ್ಕದ ಕ್ಷೇತ್ರದಲ್ಲಿ ಬಿಜೆಪಿ ಅಭ್ಯರ್ಥಿ ಗೆಲ್ಲಲಿ ಎಂದು ಕರೆ ಕೊಡುವ ಶಾಮನೂರು ಶಿವಶಂಕರಪ್ಪನವರಂಥವರನ್ನು ದೀರ್ಘಕಾಲ ನಾಯಕರಾಗಿಸಿಕೊಂಡು ಸಾಧಿಸಬಹುದಾದ ಕೆಲಸವಲ್ಲ ಅದು.

ಇವೆಲ್ಲವೂ ಎರಡು ಚುನಾವಣೆಗಳ ನಡುವೆ ಮಾಡಬೇಕಾದ ಕೆಲಸ. ಅವೆಲ್ಲವನ್ನೂ ಮಾಡದೇ, ಇದ್ದಕ್ಕಿದ್ದಂತೆ ಚುನಾವಣೆಯ ಸಂದರ್ಭದಲ್ಲಿ ಟಿಕೆಟ್ ಕೊಡುವಾಗ ಸೆಕ್ಯುಲರ್ ಆಗಿಬಿಡುವುದು ಅಷ್ಟು ಸುಲಭವಲ್ಲ. ಇವೆಲ್ಲದರ ಮಧ್ಯೆಯೂ ದಾವಣಗೆರೆ ದಕ್ಷಿಣದಲ್ಲಿ ಮುಸ್ಲಿಂ ಅಭ್ಯರ್ಥಿಯೊಬ್ಬರಿಗೆ ಟಿಕೆಟ್ ಕೊಟ್ಟು ಗೆಲ್ಲಿಸಿಕೊಂಡು ಬರುವುದು ಸಾಧ್ಯವಿತ್ತು. ಅದಕ್ಕೆ ಬೇಕಿದ್ದ ಪ್ರಬುದ್ಧತೆಯನ್ನು, ಬದ್ಧತೆಯನ್ನು ಕಾಂಗ್ರೆಸ್ಸಿನ ನಾಯಕರು ತೋರಲಿಲ್ಲ.

ಕಾಂಗ್ರೆಸ್ಸಿನ ರಾಜಕೀಯದಲ್ಲಿ ಸಂವಿಧಾನದ ತಾತ್ವಿಕತೆ, ಸಾಮಾಜಿಕ ನ್ಯಾಯದ ಆಶಯ ಮತ್ತು ಸೆಕ್ಯುಲರಿಸಂನ ಹೂರಣ ಇರುವುದೇ ಆದಲ್ಲಿ ಚುನಾವಣೆಗಳ ನಡುವೆ ಮತ್ತು ಚುನಾವಣೆಗಳ ಹೊತ್ತಿನಲ್ಲಿ ಅದು ಅಗತ್ಯವಿರುವ ಮುಂದಡಿಯಿಟ್ಟು ಕೆಲಸ ಮಾಡಬೇಕು. ಪರಿಸ್ಥಿತಿ ಎತ್ತ ಕಡೆ ಎಳೆದುಕೊಂಡು ಹೋಗುತ್ತದೋ ಅತ್ತ ಕಡೆಗೆ ವಾಲಿಬಿಟ್ಟು ನಂತರ ಯಾರ್ಯಾರ ಮೇಲೋ ಗೂಬೆ ಕೂರಿಸಿದರೆ, ಈ ದೇಶ ಈಗ ಎತ್ತ ಕಡೆಗೆ ಹೋಗುತ್ತಿದೆಯೋ ಆ ಕಡೆಗೇ ಚುನಾವಣಾ ಫಲಿತಾಂಶವೂ ಇರುತ್ತದೆ. ದಾವಣಗೆರೆ ದಕ್ಷಿಣ ಕ್ಷೇತ್ರದ ಚುನಾವಣೆಯಲ್ಲಿ ಸೋಲು-ಗೆಲುವುಗಳೇನೇ ಆಗಲಿ, ಕಾಂಗ್ರೆಸ್ಸಿನ ರಾಜಕೀಯ ಸೋಲುತ್ತದೆ; ಬಿಜೆಪಿಯ ರಾಜಕೀಯ ಗೆಲ್ಲುತ್ತದೆ. ಇವೆಲ್ಲವೂ ಕೇವಲ ಕಾಂಗ್ರೆಸ್ ಪಕ್ಷಕ್ಕೆ ಸೀಮಿತವಾದದ್ದಲ್ಲ; ಬಹುತೇಕ ಎಲ್ಲಾ ಬಿಜೆಪಿ ವಿರೋಧಿ ಪಕ್ಷಗಳಿಗೂ ಅನ್ವಯಿಸುತ್ತದೆ.

ಬಾಗಲಕೋಟೆ ನೆಲ ಐವರು ಮುಖ್ಯಮಂತ್ರಿಗಳ ಹಣೆಬರೆಹ ಬರೆದ ರಾಜಕೀಯ ಕ್ಷೇತ್ರ!



ಬಾಗಲಕೋಟೆಯಲ್ಲಿ ಲಿಂಗಾಯತ ಮತಗಳ ಪ್ರಬಲತೆ, ಕುರುಬ ಸಮುದಾಯದ ಸಾಂದ್ರತೆ ಮತ್ತು ಸ್ಥಳೀಯ ಕುಟುಂಬಗಳ ಪ್ರಭಾವವು ರಾಜಕೀಯ ನಾಯಕರಿಗೆ 'ಸುರಕ್ಷಿತ' ಆಶ್ರಯ ನೀಡುತ್ತವೆ. ಇಲ್ಲಿ ಗೆದ್ದರೆ ರಾಜ್ಯ ಮಟ್ಟದ ರಾಜಕೀಯಕ್ಕೆ ಏಣಿ; ಸೋತರೆ ಮುಂದಿನ ಪಯಣಕ್ಕೆ ಬಲ ನೀಡುತ್ತದೆ.

ಬಾಗಲಕೋಟೆ ಜಿಲ್ಲೆಯಲ್ಲಿ ಏಪ್ರಿಲ್ 9ರಂದು ನಡೆಯುವ ಉಪಚುನಾವಣೆ ಕೇವಲ ಒಂದು ಸೀಟಿನ ಗೆಲುವು-ಸೋಲು ಮಾತ್ರವಲ್ಲ. ಇದು ಕರ್ನಾಟಕ ರಾಜಕೀಯದ ಇತಿಹಾಸದಲ್ಲಿ ಒಂದು ಅಪರೂಪದ ಅಧ್ಯಾಯ. ಈ ಜಿಲ್ಲೆಯ ನೆಲ ಐವರು ಮುಖ್ಯಮಂತ್ರಿಗಳ ರಾಜಕೀಯ ಬದುಕಿನ ಹಣೆಬರೆಹವನ್ನೇ ಬರೆದಿದೆ.

ಒಂದು ಕಾಲದಲ್ಲಿ ಸುರಕ್ಷಿತ ಕ್ಷೇತ್ರವಾಗಿ, ಮತ್ತೊಂದು ಬಾರಿ ರಾಜಕೀಯ ಪುನರುಜ್ಜೀವನಕ್ಕೆ ವೇದಿಕೆಯಾಗಿ, ಬಾಗಲಕೋಟೆ ಜಿಲ್ಲೆಯ ಮತದಾರರು ಐವರು ಮುಖ್ಯಮಂತ್ರಿಗಳ ಭವಿಷ್ಯವನ್ನು ನಿರ್ಧರಿಸಿದ್ದಾರೆ. ಈಗ ಹುಲ್ಲಪ್ಪ ಮೇಟಿ ಅವರ ನಿಧನದಿಂದ ಖಾಲಿಯಾದ ಬಾಗಲಕೋಟೆ ವಿಧಾನಸಭಾ ಕ್ಷೇತ್ರದ ಉಪಚುನಾವಣೆಯಲ್ಲಿ ಆ ಇತಿಹಾಸ ಮತ್ತೊಮ್ಮೆ ಪುನರಾವರ್ತನೆಯಾಗುತ್ತಿದೆ.

ಬಾಗಲಕೋಟೆ: ಐವರು ಸಿಎಂಗಳ ರಾಜಕೀಯ ಗುರುಕ್ಷೇತ್ರ

ಉತ್ತರ ಕರ್ನಾಟಕದಲ್ಲಿ ಬಾಗಲಕೋಟೆ ಜಿಲ್ಲೆಗೆ ಮಾತ್ರ ಐವರು ಮುಖ್ಯಮಂತ್ರಿಗಳ ರಾಜಕೀಯ ಜೀವನದಲ್ಲಿ ಪ್ರಮುಖ ಪಾತ್ರವಿದೆ. ಇದು ಕೇವಲ ಆಕಸ್ಮಿಕವಲ್ಲ, ಜಿಲ್ಲೆಯ ಲಿಂಗಾಯತ-ಕುರುಬ-ಇತರ ಸಮುದಾಯಗಳ ಸಮತೋಲನ, ರಾಜಕೀಯ ಕುಟುಂಬಗಳ ಪ್ರಭಾವ ಮತ್ತು ಮತದಾರರ ಬುದ್ಧಿವಂತಿಕೆಯ ಫಲಿತಾಂಶ.

1962ರ ಉಪಚುನಾವಣೆಯಲ್ಲಿ ಎಸ್. ನಿಜಲಿಂಗಪ್ಪ ಅವರು ಬಾಗಲಕೋಟೆಯಿಂದ ಸ್ಪರ್ಧಿಸಿ ಗೆದ್ದು, ತಮ್ಮ ರಾಜಕೀಯ ಬದುಕಿಗೆ ಹೊಸ ಜೀವ ತುಂಬಿಕೊಂಡಿದ್ದರು. ತಮ್ಮ ಸ್ವಂತ ಜಿಲ್ಲೆಯಾದ ಬಳ್ಳಾರಿಯಲ್ಲಿ ವಿರೋಧಿಗಳಿಂದ ಪ್ರಬಲ ಸವಾಲು ಎದುರಿಸುತ್ತಿದ್ದ ಅವರಿಗೆ ಬಾಗಲಕೋಟೆ ಮತದಾರರು ರಕ್ಷಾ ಕವಚವಾದರು. ಅವರು ಮುಖ್ಯಮಂತ್ರಿಯಾಗಿ ಕರ್ನಾಟಕದ ರಾಜಕೀಯವನ್ನೇ ಬದಲಾಯಿಸಿದರು.

ಬಾಗಲಕೋಟೆಗೆ ನಿಜಲಿಂಗಪ್ಪನವರ ಪ್ರಮುಖ ಕೊಡುಗೆಗಳು:

ಎಸ್. ನಿಜಲಿಂಗಪ್ಪನವರು ಬಾಗಲಕೋಟೆ ಜಿಲ್ಲೆಯ, ಅದರಲ್ಲೂ ವಿಶೇಷವಾಗಿ ನವನಗರದ ಅಭಿವೃದ್ಧಿ ಹಾಗೂ ನೀರಾವರಿ ಯೋಜನೆಗಳಿಗೆ ಅಪಾರ ಕೊಡುಗೆ ನೀಡಿದ್ದಾರೆ. ಅವರು ತುಂಗಭದ್ರಾ ಅಣೆಕಟ್ಟಿನ ಯೋಜನೆಗಳನ್ನು ತ್ವರಿತಗೊಳಿಸಿ ಬಾಗಲಕೋಟೆ ಭಾಗದ ಭೂಮಿಗೆ ನೀರುಣಿಸಲು, ಕೃಷಿಕರ ಬಾಳು ಬೆಳಗಲು ಕಾರಣರಾದರು.

ನವನಗರ ನಿರ್ಮಾಣ: ಕೃಷ್ಣಾ ನದಿ ಪ್ರವಾಹದಿಂದ ಹಳೆಯ ಬಾಗಲಕೋಟೆ ನಗರ ಸಂಕಷ್ಟಕ್ಕೀಡಾಗಿದ್ದಾಗ, ಉನ್ನತ ಮಟ್ಟದಲ್ಲಿ ಯೋಜನೆ ರೂಪಿಸಿ ಆಧುನಿಕ ಸೌಲಭ್ಯಗಳ ನವನಗರವನ್ನು ನಿರ್ಮಿಸಲು ತಳಪಾಯ ಹಾಕಿದರು.

ನೀರಾವರಿ ಯೋಜನೆಗಳು: ಬಾಗಲಕೋಟೆ ಜಿಲ್ಲೆಯ ಕೃಷಿಭೂಮಿಗೆ ನೀರು ಒದಗಿಸಲು ತುಂಗಭದ್ರಾ, ಮೇಲ್ದಂಡೆ ಯೋಜನೆ ಮತ್ತು ಕೃಷ್ಣಾ ಅಚ್ಚುಕಟ್ಟು ಪ್ರದೇಶದ ಅಭಿವೃದ್ಧಿಗೆ ವಿಶೇಷ ಆದ್ಯತೆ ನೀಡಿದರು.

ಶೈಕ್ಷಣಿಕ ಮತ್ತು ಆರೋಗ್ಯ ಸಂಸ್ಥೆಗಳು: ಜಿಲ್ಲೆಯಲ್ಲಿ ಉನ್ನತ ಶಿಕ್ಷಣ ಹಾಗೂ ಆರೋಗ್ಯ ಸೌಲಭ್ಯಗಳನ್ನು ಒದಗಿಸಲು ಸಂಸ್ಥೆಗಳ ಸ್ಥಾಪನೆಗೆ ಉತ್ತೇಜನ ನೀಡಿದರು. ಇದರಲ್ಲಿ ಎಸ್ಎನ್ ಮೆಡಿಕಲ್ ಕಾಲೇಜು ಪ್ರಮುಖವಾಗಿದೆ.

ಸಾರಿಗೆ ಮತ್ತು ಮೂಲಸೌಕರ್ಯ: ಉತ್ತರ ಕರ್ನಾಟಕದ ಬೆಳಗಾವಿ, ಬಿಜಾಪುರ(ವಿಜಯಪುರ) ಮತ್ತು ಬಾಗಲಕೋಟೆ ನಡುವಿನ ಸಂಪರ್ಕ ವೃದ್ದಿಸಲು ರಸ್ತೆ ಮೂಲಸೌಕರ್ಯ ಅಭಿವೃದ್ಧಿಪಡಿಸಿದರು.

ಅವರ ಆಡಳಿತದ ಅವಧಿಯಲ್ಲಿ ಬಾಗಲಕೋಟೆ ಒಂದು ಪ್ರಮುಖ ಕೃಷಿ ಮತ್ತು ವ್ಯಾಪಾರ ಕೇಂದ್ರವಾಗಿ ಅಭಿವೃದ್ಧಿ ಹೊಂದಲು ಅಡಿಪಾಯ ಹಾಕಲಾಯಿತು.

ಇನ್ನುಬಿ.ಡಿ. ಜತ್ತಿಯವರು 1958ರಲ್ಲಿ ಜಮಖಂಡಿಯಿಂದ ರಾಜ್ಯ ಶಾಸಕಾಂಗಕ್ಕೆ ಆಯ್ಕೆಯಾದರು. ಸಚಿವರಾದರು. ಬಾಗಲಕೋಟೆ ಜಿಲ್ಲೆಯ ಭಾಗವಾದ ಜಮಖಂಡಿ ಅವರ ರಾಜಕೀಯ ಪಯಣಕ್ಕೆ ಮೊದಲ ಹೆಜ್ಜೆಯಾಯಿತು. ನಂತರ ಅವರು ಉಪರಾಷ್ಟ್ರಪತಿಯಾಗಿಯೂ ಸೇವೆ ಸಲ್ಲಿಸಿದರು.

1962ರಲ್ಲಿ ಮಹಾಚುನಾವಣೆ ನಡೆಯಿತು. ಅದರಲ್ಲಿ ಬಿ.ಡಿ ಜತ್ತಿಯವರು ಮತ್ತೆ ಜಮಖಂಡಿ ಮತಕ್ಷೇತ್ರದಿಂದ ಮೈಸೂರು ರಾಜ್ಯ ವಿಧಾನಸಭೆಗೆ ಆರಿಸಿ ಬಂದರು. ಎಸ್. ನಿಜಲಿಂಗಪ್ಪನವರು ಚಿತ್ರದುರ್ಗ ಜಿಲ್ಲೆಯ ಮೊಳಕಾಲ್ಮೂರು ತಾಲೂಕಿನಿಂದ ಚುನಾವಣೆಗೆ ನಿಂತು ಸೋತರು. ಆದರೆ ಕಾಂಗ್ರೆಸ ಪಕ್ಷಕ್ಕೆ ಬಹುಮತ ದೊರಕಿತು. ಕಾಂಗ್ರೆಸ್ ಪಕ್ಷದ ಶಾಸಕರ ಸಭೆಯಲ್ಲಿ ಜತ್ತಿಯವರ ಸ್ನೇಹಿತರಾದ ಎಸ್.ಆರ್ ಕಂಠಿಯವರನ್ನು ನಾಯಕನನ್ನಾಗಿ ಆಯ್ಕೆ ಮಾಡಲಾಯಿತು. ಜತ್ತಿಯವರು ಶಾಸಕರಾಗಿದ್ದುಕೊಂಡೇ ತಮ್ಮ ಮತಕ್ಷೇತ್ರದ ಜಮಖಂಡಿಯಲ್ಲಿ ಕಾಲೇಜನ್ನು ತೆರೆಯುವ ಬಗ್ಗೆ ಶ್ರಮಿಸಿದರು.

ಮುಖ್ಯಮಂತ್ರಿಯಾದ ನಂತರ, ಜತ್ತಿಯವರು ಹಲವಾರು ಮಹತ್ವದ ಪಾತ್ರಗಳನ್ನು ನಿರ್ವಹಿಸಿದರು. ಅಕ್ಟೋಬರ್ 1968ರಿಂದ ನವೆಂಬರ್ 1972ರವರೆಗೆ, ಅವರು ಪಾಂಡಿಚೇರಿಯ ಲೆಫ್ಟಿನೆಂಟ್ ಗವರ್ನರ್ ಆಗಿ ಸೇವೆ ಸಲ್ಲಿಸಿದರು.

ನವೆಂಬರ್ 1972ರಲ್ಲಿ, ಜತ್ತಿ ಅವರನ್ನು ಒರಿಸ್ಸಾ ದ ರಾಜ್ಯಪಾಲರನ್ನಾಗಿ ನೇಮಿಸಲಾಯಿತು. 1973ರ ಮಾರ್ಚ್‌ನಲ್ಲಿ ಒರಿಸ್ಸಾ ರಾಜ್ಯ ಸರ್ಕಾರ ರಾಜೀನಾಮೆ ನೀಡಿತು. ಹೊಸ ಸರ್ಕಾರ ರಚಿಸಲು ಸಾಕಷ್ಟು ಬೆಂಬಲವಿದೆ ಎಂದು ವಿರೋಧ ಪಕ್ಷದ ನಾಯಕರು ಹೇಳಿಕೊಂಡರೂ ಕೂಡ ಜತ್ತಿಯವರು ವಿಧಾನಸಭೆ ಅಧಿವೇಶನವನ್ನು ಮೊಟಕುಗೊಳಿಸಲು ನಿರ್ಧರಿಸಿದರು. ನಂತರ ಅವರು ರಾಜ್ಯದಲ್ಲಿ ರಾಷ್ಟ್ರಪತಿ ಆಳ್ವಿಕೆಗೆ ಶಿಫಾರಸು ಮಾಡಿದರು. ಇದು ಮಾರ್ಚ್ 1974ರವರೆಗೆ ನಡೆಯಿತು.

ಉಪರಾಷ್ಟ್ರಪತಿ ಚುನಾವಣೆಯಲ್ಲಿ ಸ್ಪರ್ಧಿಸಲು ಜತ್ತಿಯವರು 1974ರ ಆಗಸ್ಟ್‌ನಲ್ಲಿ ರಾಜ್ಯಪಾಲ ಹುದ್ದೆಗೆ ರಾಜೀನಾಮೆ ನೀಡಿದರು. ಬಳಿಕ ಅವರು ಚುನಾವಣೆಯಲ್ಲಿ ದೊಡ್ಡ ಅಂತರದಿಂದ ಗೆದ್ದರು. ಆಗಸ್ಟ್ 31ರಂದು ಭಾರತದ ಉಪರಾಷ್ಟ್ರಪತಿಯಾಗಿ ಪ್ರಮಾಣವಚನ ಸ್ವೀಕರಿಸಿದರು.

ರಾಷ್ಟ್ರಪತಿ ಫಕ್ರುದ್ದೀನ್ ಅಲಿ ಅಹ್ಮದ್ ಅವರು 1977ರ ಫೆಬ್ರವರಿ 11ರಂದು ನಿಧನರಾದಾಗ, ಅದೇ ದಿನ ಜತ್ತಿಯವರು ಭಾರತದ ಹಂಗಾಮಿ ರಾಷ್ಟ್ರಪತಿಯಾದರು. 1977ರ ಚುನಾವಣೆಯಲ್ಲಿ ಆಡಳಿತ ಪಕ್ಷ ಸೋತ ನಂತರ, ಜತ್ತಿಯವರು ನಿರ್ಗಮಿತ ಪ್ರಧಾನಿಯನ್ನು ತಾತ್ಕಾಲಿಕ ನಾಯಕರಾಗಿ ಮುಂದುವರಿಯುವಂತೆ ಕೇಳಿಕೊಂಡರು. ಅವರು 1977ರ ಮಾರ್ಚ್ 21 ಭಾರತದಲ್ಲಿ ತುರ್ತು ಪರಿಸ್ಥಿತಿ ಅವಧಿಯನ್ನು ಸಹ ಕೊನೆಗೊಳಿಸಿದರು. ನಂತರ ಮೊರಾರ್ಜಿ ದೇಸಾಯಿ ಅವರು ಪ್ರಧಾನಿಯಾದಾಗ ಅವರಿಗೆ ಪ್ರಮಾಣ ವಚನ ಬೋಧಿಸಿದರು.

ಏಪ್ರಿಲ್ 1977ರಲ್ಲಿ, ಹೊಸ ಸರ್ಕಾರವು ಹಿಂದಿನ ಪಕ್ಷದ ಆಳ್ವಿಕೆಯಲ್ಲಿದ್ದ ಹಲವಾರು ರಾಜ್ಯಗಳಲ್ಲಿನ ಸರ್ಕಾರಗಳನ್ನು ವಜಾಗೊಳಿಸಲು ಸೂಚಿಸಿತು. ಜತ್ತಿಯವರು ಒಂದು ದಿನ ಕಾಲಾವಕಾಶ ಪಡೆದು ನಂತರ ಒಪ್ಪಿಕೊಂಡರು. ಅವರು ಒಂಬತ್ತು ರಾಜ್ಯಗಳಲ್ಲಿನ ಸರ್ಕಾರಗಳನ್ನು ವಜಾಗೊಳಿಸಿದರು. ಜತ್ತಿ ಅವರ ನಂತರ 1977ರ ಜುಲೈ 25ರಂದು ನೀಲಂ ಸಂಜೀವ ರೆಡ್ಡಿ ಅವರು ಭಾರತದ ರಾಷ್ಟ್ರಪತಿಯಾಗಿ ಅಧಿಕಾರ ವಹಿಸಿಕೊಂಡರು.

ಎಸ್ ಆರ್ ಕಂಠಿಯವರು 1956ರಿಂದ 1962ರವರೆಗೆ ಕರ್ನಾಟಕ ವಿಧಾನಸಭೆಯ ಸಭಾಪತಿಯಾಗಿ ಸೇವೆ ಸಲ್ಲಿಸಿದರು. 1962ರಲ್ಲಿ ಹುನಗುಂದದಿಂದ ಗೆದ್ದು ಮುಖ್ಯಮಂತ್ರಿಯಾದರು. ಕಂಠಿಯವರು 1962ರಲ್ಲಿ 92 ದಿನಗಳ ಅಲ್ಪಾವಧಿಗೆ ರಾಜ್ಯದ ಮುಖ್ಯಮಂತ್ರಿಯಾಗಿದ್ದರು. ಅವರ ಆಡಳಿತ ಕಾಲವು ಕೆಲವು ತಿಂಗಳುಗಳಷ್ಟೇ ಆದರೂ, ಬಾಗಲಕೋಟೆ ಜಿಲ್ಲೆಯ ಹುನಗುಂದದ ಮತದಾರರು ಅವರ ಹಣೆಬರೆಹ ಬದಲು ಮಾಡಿದರು.

ಆಗಿನ ಮುಂಬಯಿ ಸರ್ಕಾರ ಹಾಗೂ ಶಾಸಕಾಂಗ, ಹಿಂದುಳಿದವರ ಶಿಕ್ಷಣ, ಕೃಷಿ ಹಾಗೂ ಸಮಾಜ ಕಲ್ಯಾಣ, ಇತ್ಯಾದಿ ಪ್ರಮುಖ ಇಲಾಖೆಗಳಲ್ಲಿ ಹೊಸ ಹೊಸ ಸುಧಾರಣೆಗಳನ್ನು ತರುವಲ್ಲಿ ವೈಶಿಷ್ಟ್ಯ ಪೂರ್ಣವಾದ ಕಾಯ್ದೆ ಕಾನೂನು ರೂಪಿಸುವಲ್ಲಿ ದೇಶದಲ್ಲಿಯೇ ಮಹತ್ವದ ಸ್ಥಾನ ಗಳಿಸಿಕೊಂಡಿತ್ತು. ಆ ಒಂದು ಅಪೂರ್ವ ವಾತಾವರಣದ ಸಂಪೂರ್ಣ ಲಾಭವನ್ನು ಕಂಠಿಯವರು ಪಡೆದರು. ಸ್ವತಃ ಕಾನೂನು ಪದವೀಧರರಾದುದರಿಂದ ಉಪಸಭಾಧ್ಯಕ್ಷರ ಹುದ್ದೆ ನಿಭಾಯಿಸುವುದು ಅವರಿಗೆ ಕಷ್ಟವಾಗಲಿಲ್ಲ. ವಿಧಾನಸಭೆಯ ನಡವಳಿಗಳನ್ನು ನೋಡಿಕೊಳ್ಳುವುದರಲ್ಲಿ ಬಹಳ ಬಿಗಿ ಎಂದು ಹೆಸರು ಪಡೆದು ತುಂಬ ಯಶಸ್ವಿಯಾಗಿ ತಮ್ಮ ಕಾರ್ಯ ನಿರ್ವಹಿಸಿ ಅಲ್ಲಿಯ ರೀತಿ ನೀತಿಗಳಿಗೆ, ಪರಂಪರೆಗೆ ತಮ್ಮ ಕಾಣಿಕೆಯನ್ನೂ ನೀಡುವಲ್ಲಿ ಸಫಲರಾದರು.

ಮಾಜಿ ಮುಖ್ಯಮಂತ್ರಿ ರಾಮಕೃಷ್ಣ ಹೆಗಡೆಯವರು ಉತ್ತರ ಕನ್ನಡ ಜಿಲ್ಲೆಯ ಸಿದ್ದಾಪುರದವರು. ಇವರು 1991ರಲ್ಲಿ ಬಾಗಲಕೋಟೆ ಲೋಕಸಭಾ ಕ್ಷೇತ್ರದಿಂದ ಸ್ಪರ್ಧಿಸಿದ್ದರು. ಆಗ ಅವರ ಗೆಲುವು ನಿಶ್ಚಿತವೆಂದೇ ಭಾವಿಸಲಾಗಿತ್ತು. ಆದರೆ, 1990ರ ದಶಕದ ಆರಂಭದಲ್ಲಿ ನಡೆದ ಚುನಾವಣೆಯಲ್ಲಿ, ಕಾಂಗ್ರೆಸ್‌ನ ಸಿದ್ದು ನ್ಯಾಮಗೌಡ ಅವರು ಅನಿರೀಕ್ಷಿತವಾಗಿ ಹೆಗಡೆಯವರನ್ನು ಸೋಲಿಸಿ, ಕರ್ನಾಟಕದ ರಾಜಕೀಯ ಇತಿಹಾಸದಲ್ಲಿ ಬೃಹತ್ ಜಯ ದಾಖಲಿಸಿದ್ದರು. ಸಿದ್ದು ನ್ಯಾಮಗೌಡ ಅವರಿಂದ ಸೋತರೂ, ಜಿಲ್ಲೆಯ ರಾಜಕೀಯ ಅನುಭವ ಅವರ ರಾಷ್ಟ್ರೀಯ ಮಟ್ಟದ ಪಯಣಕ್ಕೆ ಸಂಪರ್ಕ ಸೇತುವೆಯಾಯಿತು. ನಂತರ ರಾಜ್ಯಸಭೆ ಸದಸ್ಯರಾಗಿ, ಕೇಂದ್ರ ಸಚಿವರಾಗಿ ಸೇವೆ ಸಲ್ಲಿಸಿದರು.

ರಾಮಕೃಷ್ಣ ಹೆಗಡೆಯವರು 1983 ಮತ್ತು 1988ರ ನಡುವೆ ಮೂರು ಅವಧಿಗೆ ಕರ್ನಾಟಕದ ಮುಖ್ಯಮಂತ್ರಿಯಾಗಿ ಸೇವೆ ಸಲ್ಲಿಸಿದರು. ಪಂಚಾಯತ್ ರಾಜ್ ಕಾಯಿದೆಯನ್ನು ಜಾರಿಗೆ ತಂದ ಮೊದಲ ರಾಜ್ಯ ಕರ್ನಾಟಕ ಎಂಬ ಹೆಗ್ಗಳಿಕೆಗೆ ಪಾತ್ರರಾದರು. ರಾಜೀವ್ ಗಾಂಧಿಯವರು ಸಂವಿಧಾನಕ್ಕೆ 73ನೇ ತಿದ್ದುಪಡಿ ತಂದು ಜಾರಿ ಮಾಡಲು ಹೊರಟ ಪಂಚಾಯತ್ ರಾಜ್ ವ್ಯವಸ್ಥೆಗೆ ಹೆಗಡೆಯವರ ಮಾದರಿಯೇ ಪ್ರೇರಣೆಯಾಗಿತ್ತು

ಪ್ರಸ್ತುತ ಸಿಎಂ ಸಿದ್ದರಾಮಯ್ಯ ಅವರು 2018ರಲ್ಲಿ ಬಾಗಲಕೋಟೆ ಜಿಲ್ಲೆಯ ಬಾದಾಮಿಯಿಂದ ಸ್ಪರ್ಧಿಸಿ ಗೆದ್ದು ರಾಜಕೀಯ ಪುನರುಜ್ಜೀವನ ಪಡೆದರು. ರಾಜ್ಯದ ವಿರೋಧ ಪಕ್ಷದ ನಾಯಕರಾಗಿ ಹೊರಹೊಮ್ಮಿದರು. ಮೈಸೂರು ಜಿಲ್ಲೆಯಲ್ಲಿ ವಿರೋಧ ಎದುರಿಸುತ್ತಿದ್ದ ಅವರಿಗೆ ಬಾಗಲಕೋಟೆ ಜಿಲ್ಲೆಯ ಕುರುಬ ಸಮುದಾಯದ ಬೆಂಬಲವು ದೊಡ್ಡ ಆಧಾರವಾಯಿತು.

ಸಿದ್ದರಾಮಯ್ಯನವರು 2023ರಂದು ಕೋಲಾರ ಮತಕ್ಷೇತ್ರದಲ್ಲಿ ಸ್ಪರ್ಧೆ ಮಾಡುವುದಾಗಿ ಹೇಳಿಕೆ ನೀಡಿದ ಬೆನ್ನಲ್ಲೆ ಬಾದಾಮಿ ಕ್ಷೇತ್ರದ ಪಕ್ಷದ ಕಾರ್ಯಕರ್ತರಿಗೆ, ಆಪ್ತರಿಗೆ, ಅಭಿಮಾನಿಗಳಿಗೆ ಬೇಸರ ಉಂಟಾಗಿದ್ದು ಮನವೊಲಿಕೆಗೆ ಮುಂದಾಗಿದ್ದರು. ಈ ವೇಳೆ, ''ಸಿದ್ದರಾಮಯ್ಯನವರು ಬಾದಾಮಿ ಅಭಿವೃದ್ಧಿಗಾಗಿ ವಿವಿಧ ಯೋಜನೆಗಳ ಸುಮಾರು 3 ಸಾವಿರ ಕೋಟಿ ರೂಪಾಯಿ ಅನುದಾನ ತಂದಿದ್ದರು. ರಸ್ತೆ, ಕುಡಿಯುವ ನೀರು, ನೀರಾವರಿ ಹಾಗೂ ಏತ ನೀರಾವರಿ ಯೋಜನೆ ಸೇರಿದಂತೆ ಐತಿಹಾಸಿಕ ಸ್ಥಳದ ಅಭಿವೃದ್ಧಿಗಾಗಿಯೂ ಕೆಲ ಯೋಜನೆಗಳನ್ನು ತರುವುದಕ್ಕಾಗಿ ಸರ್ಕಾರದ ಮುಖ್ಯಮಂತ್ರಿ ಹಾಗೂ ಆಯಾ ಇಲಾಖೆಯ ಸಚಿವರ ಮೇಲೆ ಒತ್ತಡ ತಂದು ಕೆಲಸ ಮಾಡಿಸಿದ್ದರು. ಹೀಗಾಗಿ ಈ ಭಾರಿಯು ಬಾದಾಮಿಯಿಂದಲೇ ಸ್ಪರ್ಧೆ ಮಾಡಿ ಜಯ ಗಳಿಸಿದರೆ, ಮುಂದೆ ಮುಖ್ಯಮಂತ್ರಿಯಾಗುತ್ತಾರೆ. ಆಗ ಇಡೀ ಕ್ಷೇತ್ರದ ಚಿತ್ರಣವೇ ಬದಲಾವಣೆಯಾಗುತ್ತದೆ'' ಎಂದು ಅಭಿಮಾನಿಗಳು ಹಾಗೂ ಆಪ್ತರು ಹೆಚ್ಚು ಆಸೆ ಇಟ್ಟುಕೊಂಡಿದ್ದರು. ಸಿದ್ದರಾಮಯ್ಯನವರು ಈಗ ಮತ್ತೊಮ್ಮೆ ಮುಖ್ಯಮಂತ್ರಿಯಾಗಿದ್ದು, ಈ ಉಪಚುನಾವಣೆಯ ಪ್ರಚಾರ ಕಾರ್ಯದಲ್ಲಿ ತೊಡಗಿಕೊಂಡಿದ್ದಾರೆ.

ಈ ಐವರ ರಾಜಕೀಯ ಪಯಣದಲ್ಲಿ ಬಾಗಲಕೋಟೆ ಜಿಲ್ಲೆಯು ಕೇವಲ ಒಂದು ಕ್ಷೇತ್ರವಲ್ಲ, ಅದು ರಾಜಕೀಯ ಗುರುಕ್ಷೇತ್ರ. ಇಲ್ಲಿನ ಮತದಾರರು ನಾಯಕರ ಹಣೆಬರೆಹ ಬರೆದಿದ್ದಾರೆ. ಇಲ್ಲಿ ಕುಟುಂಬ ರಾಜಕಾರಣ, ಸಮುದಾಯ ಸಮೀಕರಣ ಮತ್ತು ಮತದಾರರ ಬುದ್ಧಿಮತ್ತೆ ಒಟ್ಟಾಗಿ ಕೆಲಸ ಮಾಡುತ್ತವೆ. ಈಗಿನ ಉಪಚುನಾವಣೆಯಲ್ಲಿ ಈ ಇತಿಹಾಸ ಮತ್ತೊಮ್ಮೆ ಪುನರಾವರ್ತನೆಯಾಗುವ ಸಾಧ್ಯತೆ ಇದೆ. ಬಾಗಲಕೋಟೆಯ ನೆಲ ರಾಜಕೀಯದಲ್ಲಿ ಯಾವಾಗಲೂ ಅಚ್ಚರಿಗಳನ್ನು ಸೃಷ್ಟಿಸುತ್ತದೆ!

ಈಗಿನ ಉಪಚುನಾವಣೆ: ಕುಟುಂಬ ರಾಜಕೀಯದ ಹೊಸ ಅಧ್ಯಾಯ

ಹುಲ್ಲಪ್ಪ ಮೇಟಿ(ಎಚ್ ವೈ ಮೇಟಿ) ಅವರ ನಿಧನದಿಂದ ಖಾಲಿಯಾದ ಕ್ಷೇತ್ರದಲ್ಲಿ ಕಾಂಗ್ರೆಸ್‌ನಿಂದ ಅವರ ಪುತ್ರ ಉಮೇಶ್ ಮೇಟಿ, ಬಿಜೆಪಿಯಿಂದ ವೀರಣ್ಣ ಚರಂತಿಮಠ ಸ್ಪರ್ಧಿಸಿದ್ದಾರೆ. 1989ರಿಂದ ಈ ಕ್ಷೇತ್ರವು ಮೇಟಿ, ಸರನಾಯಕ, ನಿರಾಣಿ, ಚರಂತಿಮಠ, ಪೂಜಾರಿ ಕುಟುಂಬಗಳ ನಡುವಿನ ಪೈಪೋಟಿಯಾಗಿದೆ. 2023ರಲ್ಲಿ ಹುಲ್ಲಪ್ಪ ಮೇಟಿ ತಮ್ಮ ಸಹೋದರಿ ಗಂಡ ಮಲ್ಲಿಕಾರ್ಜುನ ಚರಂತಿಮಠ ಅವರ ವಿರುದ್ಧ ಗೆದ್ದಿದ್ದರು.

ಕಾಂಗ್ರೆಸ್‌ಗೆ ಇದು ಅನುಕಂಪ ಮತ್ತು ಕುರುಬ ಸಮುದಾಯದ ಮತಗಳನ್ನು ಉಳಿಸಿಕೊಳ್ಳುವ ಪ್ರಶ್ನೆ. ಹಾಗೆಯೇ ಬಿಜೆಪಿಗೆ ಉತ್ತರ ಕರ್ನಾಟಕದಲ್ಲಿ ಪುನರಾಗಮನದ ಅವಕಾಶ. ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್‌ರಂತಹ ನಾಯಕರು ಪ್ರಚಾರದಲ್ಲಿ ತೊಡಗಿದ್ದಾರೆ. ಈ ನಡುವೆ ಇದು ಕೇವಲ ಉಪಚುನಾವಣೆಯಲ್ಲ, 2028ರ ವಿಧಾನಸಭಾ ಚುನಾವಣೆಗೆ ದಿಕ್ಸೂಚಿ ಎಂದು ಬಿಜೆಪಿ ಹೇಳುತ್ತಿದೆ.

ಬಾಗಲಕೋಟೆ ಏಕೆ ರಾಜಕೀಯ ಗುರುತ್ವಾಕರ್ಷಣೆಯ ಕೇಂದ್ರ?

ಬಾಗಲಕೋಟೆಯಲ್ಲಿ ಲಿಂಗಾಯತ ಮತಗಳ ಪ್ರಬಲತೆ, ಕುರುಬ ಸಮುದಾಯದ ಸಾಂದ್ರತೆ ಮತ್ತು ಸ್ಥಳೀಯ ಕುಟುಂಬಗಳ ಪ್ರಭಾವವು ರಾಜಕೀಯ ನಾಯಕರಿಗೆ ಸುರಕ್ಷಿತ ಆಶ್ರಯ ನೀಡುತ್ತವೆ. ಇಲ್ಲಿ ಗೆದ್ದರೆ ರಾಜ್ಯ ಮಟ್ಟದ ರಾಜಕೀಯಕ್ಕೆ ಏಣಿ ದೊರೆಯುತ್ತದೆ. ಸೋತರೂ, ಅನುಭವವು ಮುಂದಿನ ಪಯಣಕ್ಕೆ ಬಲ ನೀಡುತ್ತದೆ. ಇದೇ ಕಾರಣಕ್ಕೆ ಐವರು ಮುಖ್ಯಮಂತ್ರಿಗಳ ಹಣೆಬರೆಹ ಇಲ್ಲಿ ಬರೆಯಲ್ಪಟ್ಟಿತು.

ಬಾಗಲಕೋಟೆ ಉಪಚುನಾವಣೆಯ ಫಲಿತಾಂಶವು ಕರ್ನಾಟಕ ರಾಜಕೀಯದ ಮುಂದಿನ ದಶಕದ ದಿಕ್ಕನ್ನು ನಿರ್ಧರಿಸುವ ಸಾಧ್ಯತೆ ಇದೆ. ಬಾಗಲಕೋಟೆಯ ಮತದಾರರು ಇನ್ನೊಮ್ಮೆ ಇತಿಹಾಸ ಬರೆಯುತ್ತಾರೆಯೇ? ಅಥವಾ ಹೊಸ ಅಧ್ಯಾಯವನ್ನು ತೆರೆಯುತ್ತಾರೆಯೇ? ಎಂಬುದು ಮತಪೆಟ್ಟಿಗೆಗಳನ್ನು ತೆರೆದಾಗ ತಿಳಿಯುತ್ತದೆ. ಆದರೆ ಒಂದು ವಿಷಯ ಸ್ಪಷ್ಟ: ಬಾಗಲಕೋಟೆ ಜಿಲ್ಲೆಯು ಕರ್ನಾಟಕ ರಾಜಕೀಯದಲ್ಲಿ ಕಿಂಗ್ ಮೇರ್ಕ ಪಾತ್ರವನ್ನು ಮುಂದುವರೆಸುತ್ತದೆ.

ಪತ್ರಿಕೆ ಓದುವ ಹವ್ಯಾಸ ಬೆಳಸಿಕೊಳ್ಳಿ

Printed and Published by: SUNDAR and Owned by: SUNDAR Printed at: SHILPA PUBLICATIONS AND PRINTING PRESS, No. 5-122/2,Ward No.20, Vidya Nagara Colony, Sirwar-584129, Raichur Dist, Karnataka. Published at: No. 5-122/2,Ward No.20, Vidya Nagara Colony, Sirwar-584129, Raichur Dist, Karnataka. Editor: SUNDAR